
# ಡಾ. ಬಸವರಾಜ ಮಲಶೆಟ್ಟಿ

## ವ್ಯಕ್ತಿ ಪರಿಚಯ



ಡಾ. ಸಿ.ಕೆ. ನಾವಲಗಿ

ಜನಪ್ರಿಯ ಜಾನಪದ ಪುಸ್ತಕ ಮಾಲೆ – ೪೫

# ಡಾ. ಬಸವರಾಜ ಮಲಶೆಟ್ಟಿ

ವ್ಯಕ್ತಿ ಪರಿಚಯ

ಡಾ. ಸಿ. ಕೆ. ನಾವಲಗಿ

ಕರ್ನಾಟಕ ಜಾನಪದ ಪರಿಷತ್ತು
ನಂ.1, ಜಲದರ್ಶಿನಿ ಲೇ ಔಟ್,
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ಹೊಸ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054

**DR. BASAVARAJA MALASHETTY-**
A pen portrait - by Dr. C.K. NAVALAGI.
Published by : KARNATAKA JANAPADA PARISHATHU,
No.1, Jaladarshini Layout (Near M.S. Ramaiah Hospital Gate),
New B.E.L. Road, Bengalooru - 560 054. Ph : 080-23605033.
Pages : 40 Price : Rs. 15 2010.

ಪ್ರಥಮ ಮುದ್ರಣ ೨೦೧೦

ಪ್ರತಿಗಳು ೨೦೦೦

ಪುಟಗಳು ೪೦

ಬೆಲೆ : ರೂ.೧೫ (ಹದಿನೈದು ರೂಪಾಯಿ)

**ಹಕ್ಕುಗಳು ಲೇಖಕರಿಗೆ ಸೇರಿವೆ**

**<u>ಗ್ರಂಥ ಪ್ರಕಟಣಾ ಸಲಹಾ ಸಮಿತಿ</u>**

| | |
|---|---|
| ನಾಡೋಜ ಡಾ. ಜಿ. ನಾರಾಯಣ | ಅಧ್ಯಕ್ಷರು |
| ಶ್ರೀ ಟಿ. ತಿಮ್ಮೇಗೌಡ | ಸದಸ್ಯರು |
| ಶ್ರೀಮತಿ ಇಂದಿರಾ ಬಾಲಕೃಷ್ಣ | ಸದಸ್ಯರು |
| ಶ್ರೀ ಗೊ.ರು. ಚನ್ನಬಸಪ್ಪ | ಸದಸ್ಯರು |
| ನಾಡೋಜ ಡಾ. ಸಿದ್ಧಲಿಂಗಯ್ಯ | ಸದಸ್ಯರು |
| ಡಾ. ಎಂ. ಎ. ಜಯಚಂದ್ರ | ಸದಸ್ಯರು |
| ಪ್ರೊ. ಡಿ. ಲಿಂಗಯ್ಯ | ಸಂಪಾದಕರು |
| ಡಾ. ಚಕ್ಕೆರೆ ಶಿವಶಂಕರ್ | ಕಾರ್ಯದರ್ಶಿ-ಸಂಚಾಲಕರು |

ಮುದ್ರಕರು ಕೃತಿಕ ಪ್ರಿಂಟ್-ಆ್ಯಡ್
ನಂ. 58, 1ನೇ ಕ್ರಾಸ್, ಜೆ.ಕೆ. ಪುರಂ
ವಿನಾಯಕನಗರ, ಆಡುಗೋಡಿ ಪೋಸ್ಟ್
ಬೆಂಗಳೂರು – 560 030
ಮೊಬೈಲ್ – 98441 14958

# ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ' ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತಸಾಹಿತ್ಯದ ಸೋದಾಹರಣ ವ್ಯಾಖ್ಯಾನ – ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ಅಥವಾ ಹದಿನೈದು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ **ಡಾ. ಸಿ.ಕೆ. ನಾವಲಗಿ** ಅವರು **ಡಾ. ಬಸವರಾಜ ಮಲಶೆಟ್ಟಿ** ಅವರನ್ನು ಕುರಿತ ಗ್ರಂಥವನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟಣಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ನಾಡೋಜ ಡಾ. ಜಿ. ನಾರಾಯಣ**
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

**ಬೆಂಗಳೂರು**
೦೧-೦೨-೨೦೧೦

# ಡಾ. ಬಸವರಾಜ ಮಲಶೆಟ್ಟಿ

## ಜಾನಪದ ಒಲವು-ಸಾಧನೆ

ಬೆಳಗಾವಿ ಜಿಲ್ಲೆಯ 'ಜನಪದ ಸಾಹಿತ್ಯ'ದ ಸಂಗ್ರಹ, ಸಂಪಾದನೆ, ಅಧ್ಯಯನ, ಸಂಶೋಧನೆ, ವಿಮರ್ಶೆಗಳ ಮೂಲಕ ಅದರ ಉಳಿವಿಗಾಗಿ ಪರಿಶ್ರಮಿಸಿದ ಕೆಲವರು ಜನಪದ ವಿದ್ವಾಂಸರು ಈ ಭಾಗದಲ್ಲಿದ್ದಾರೆ. ಅಂಥವರಲ್ಲಿ ಬೆಟಗೇರಿ ಕೃಷ್ಣಶರ್ಮ, ಚಂದ್ರಶೇಖರ ಕಂಬಾರ, ಎಂ.ಎಸ್.ಲಠ್ಠೆ, ಜ್ಯೋತಿ ಹೊಸೂರ, ನಿಂಗಣ್ಣ ಸಣ್ಣಕ್ಕಿ, ಬಸವರಾಜ ಮಲಶೆಟ್ಟಿ, ಶ್ರೀರಾಮ ಇಟ್ಟಣ್ಣವರ, ಸಿ.ಕೆ. ನಾವಲಗಿ ಪ್ರಮುಖರು ಮತ್ತು ಗಮನೀಯರು.

ಚಂದ್ರಶೇಖರ ಕಂಬಾರರ ನಂತರ 'ಉತ್ತರ ಕರ್ನಾಟಕದ ಬಯಲಾಟ' ಗಳನ್ನು ಕುರಿತು ವಿಶೇಷವಾಗಿ ಅಭ್ಯಾಸಮಾಡಿ, ಅದೇ ವಿಷಯದಲ್ಲಿ ಸಂಶೋಧನಾಧ್ಯಯನ ಕೈಗೊಂಡು ಮಹಾಪ್ರಬಂಧ ಬರೆದವರು ಡಾ.ಬಸವರಾಜ ಮಲಶೆಟ್ಟಿಯವರು. ಬಯಲಾಟ ಕಲಾವಿದ, ಅಭಿಜಾತ ಗೀಗೀಕವಿ ಮತ್ತು ಹವ್ಯಾಸಿ ಗೀಗೀ ಹಾಡುಗಾರ-ಲಾವಣಿಕಾರ, ಭಜನೆ ಹಾಡುಗಾರ, 'ನಿಜಗುಣ ಶಿವಯೋಗಿ' ಸಣ್ಣಾಟ ಸಂಘಟಕ ಮತ್ತು ಕುಸ್ತಿಪಟು ಮರಿಕಲ್ಲಪ್ಪ ಮಲಶೆಟ್ಟಿ ಇವರ ತಂದೆ. 'ಸೋಬಾನೆ' ಹಾಡುಗಾರ್ತಿ ನಾಗೇಂದ್ರವ್ವ ಇವರ ತಾಯಿ. ಇವರ ಅಜ್ಜ ರುದ್ರಪ್ಪ ಕೂಡ ಕುಸ್ತಿಪಟು ಮತ್ತು ಹವ್ಯಾಸಿ ಲಾವಣಿಕಾರ. ಸಾಮಾನ್ಯ ರೈತ ಕುಟುಂಬದ ಕಲಾವಿದರ ಮನೆತನ ಮಲಶೆಟ್ಟಿಯವರದು. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ, ಚೆನ್ನಮ್ಮನ ಕಿತ್ತೂರು ಸಮೀಪದ ತಿಗಡೊಳ್ಳಿ ಗ್ರಾಮದಲ್ಲಿ ೧೦-೦೮-೧೯೪೯ರಂದು ಬಸವರಾಜ ಜನಿಸಿದರು. ಆನುವಂಶಿಕವಾಗಿ ಕಲೆಯ ಸಂಸ್ಕಾರ ಈ ಎಳೆಯ ಮನಸ್ಸಿನ ಮೇಲೆ ಆಗುತ್ತಿದ್ದಂತೆಯೇ, ತಿಗಡೊಳ್ಳಿಯಲ್ಲಿ ನಡೆಯುತ್ತಿದ್ದ ದೊಡ್ಡಾಟ, ಪಾರಿಜಾತ,

ಸಣ್ಣಾಟ, ಕುಣಿತಗಳು, ಪಗರಣದ ಮಾದರಿಯ ಸೋಗುಗಳು, ಲಾವಣಿಗೋಷ್ಠಿಗಳು, ಭಜನೆಮೇಳಗಳು ಬಾಲಕ ಬಸವರಾಜನ ಮೇಲೆ ಗಾಢಪ್ರಭಾವ ಬೀರಿದುವು. ತಂದೆಯ ನೇತೃತ್ವದ ಬಯಲಾಟಗಳಲ್ಲಿ ಬಾಲಕನಿರುವಾಗಲೇ (ಹತ್ತುವರ್ಷ) ಪ್ರವೇಶಪಡೆದ. ಈತನ ಬಾಲ್ಯದ ಬಯಲಾಟದ ಆಸಕ್ತಿ ಕನ್ನಡ ಎಂ.ಎ.ದಲ್ಲಿ ಜನಪದ ಸಾಹಿತ್ಯವನ್ನು ವಿಶೇಷ ಅಧ್ಯಯನ ವಿಷಯವಾಗಿ ಆರಿಸಿಕೊಳ್ಳಲು ಸ್ಫೂರ್ತಿನೀಡಿದ್ದು ಮಾತ್ರವಲ್ಲ ಜನಪದ ರಂಗಭೂಮಿಯ ಬಗೆಗೆ ಸಂಶೋಧನೆ ಮಾಡಲು ಮುಖ್ಯ ಪ್ರೇರಣೆಯಾಯಿತು. ಅಸಂಖ್ಯ ಕಲಾವಿದರ ಸ್ನೇಹ–ಸಂಪರ್ಕ ಇವರಿಗಿದೆ. ಅವರ ಸಂದರ್ಶನಗಳಿಂದ ದೊರೆತ ಮಾಹಿತಿ, ಕ್ಷೇತ್ರಕಾರ್ಯದಿಂದ ಪಡೆದ ಅನುಭವದ ಆಧಾರದ ಮೇಲೆಯೇ ಮಹಾಪ್ರಬಂಧದ ಬಹುಭಾಗ ಬರೆದಿದ್ದಾರೆ. ೧೯೭೭ರಲ್ಲಿ ಧಾರವಾಡ ಕ.ವಿ.ವಿ. ದಿಂದ ಪಿಎಚ್.ಡಿ ಪದವಿ ಪಡೆದ 'ಉತ್ತರಕರ್ನಾಟಕದ ಬಯಲಾಟಗಳು' ಮಹಾಪ್ರಬಂಧವನ್ನು ಪರಿಶೀಲಿಸಿದರೆ, ಮಲಶೆಟ್ಟಿ ಅವರು ದೊಡ್ಡಾಟ, ಡಪ್ಪಿನಾಟ (ಸಣ್ಣಾಟ), ಶ್ರೀಕೃಷ್ಣ ಪಾರಿಜಾತಗಳ ಮೇಲೆ ಅಧಿಕೃತವಾಗಿ ಮಾತನಾಡಬಲ್ಲ ಮತ್ತು ಬರೆಯಬಲ್ಲ ಅಪರೂಪದ ಜನಪದ ವಿದ್ವಾಂಸರೆಂಬುದು ವಿದಿತವಾಗುತ್ತದೆ.

ಮಲಶೆಟ್ಟಿ ಅವರು ಜನಪದ ಕಲೆ, ಸಂಗೀತ, ವಾದ್ಯವಿಶೇಷಗಳೊಂದಿಗೆ ಬಾಲ್ಯದಿಂದಲೂ ಆತ್ಮೀಯ ಸಂಬಂಧ ಇರಿಸಿಕೊಂಡವರು; ಸಂಗೀತದ ಸರಿಯಾದ ತಿಳಿವಳಿಕೆಯುಳ್ಳವರು, ಅಷ್ಟೇ ಏಕೆ? ಜನಪದ ಮತ್ತು ಶಾಸ್ತ್ರೀಯ ಸಂಗೀತಗಳಲ್ಲಿ ಪರಿಣಿತರು. ನಟ, ನಾಟಕಕಾರ, ನಿರ್ದೇಶಕ, ಸಂಘಟಕ, ಹಾಡುಗಾರರಾಗಿಯೂ ಇವರು ತಮ್ಮ ವ್ಯಕ್ತಿತ್ವವನ್ನು ವಿಸ್ತರಿಸಿಕೊಂಡವರು. ರಂಗಗೀತೆಗಳನ್ನು (ಬಯಲಾಟ ಪದಗಳು), ಇತರ ಜನಪದ ಹಾಡುಗಳನ್ನು, ಜನಪದದ ಮೂಲಧಾಟಿಯಲ್ಲಿ ವಾದ್ಯಸಮೇತ ಹಾಡಬಲ್ಲರು. ವಾದ್ಯಗಳನ್ನು ಸ್ವತಃ ನುಡಿಸಬಲ್ಲರು. ಸ್ವಂತ ಮೇಳಕಟ್ಟಿ ಬಯಲಾಟದ ಪದಗಳನ್ನು ನಾಡಿನುದ್ದಗಲಕ್ಕೂ ಪ್ರಸಾರಮಾಡಿದ್ದಾರೆ. ಮುಮ್ಮೇಳದಲ್ಲಿ ಹಾರ್ಮೋನಿಯಂ ನುಡಿಸುತ್ತ ಬಯಲಾಟದ ಪದಗಳನ್ನು ಮೂಲಧಾಟಿಯಲ್ಲಿ ಹಾಡುವ ಮೂಲಕ,

ಜನಪದ ಸಂಗೀತದ ತಾಯಿಬೇರನ್ನೇ ತೆರೆದುತೋರುವ ವೈಖರಿ ಮಲಶೆಟ್ಟಿ ಅವರಂಥ ಕೆಲವರಿಗೆ ಮಾತ್ರ ಸಿದ್ಧಿಸಿದ್ದೆಂದು ಕಾಣುತ್ತದೆ!

ದೊಡ್ಡಾಟದ ಕಲಾವಿದರು, ರಚನೆಕಾರರು, ನಿರ್ದೇಶಕರು, ಸೂತ್ರಧಾರರು–ಏನೆಲ್ಲವೂ ಆದ ಮಲಶೆಟ್ಟಿ, ಅದರ ಉಳಿವಿಗಾಗಿ ನಾನಾ ಬಗೆಯ ಪ್ರಯತ್ನಮಾಡಿದ್ದಾರೆ. 'ಗಿರಿಜಾಕಲ್ಯಾಣ' ದೊಡ್ಡಾಟವನ್ನು ಮೂರು ಗಂಟೆಗಳ ಕಾಲಮಿತಿಗೆ ಅಳವಡಿಸಿ, ನಾನಾ ಪ್ರಯೋಗಗಳನ್ನು ಪ್ರದರ್ಶಿಸಿದ ಕೀರ್ತಿ ಇವರದು. ಹೊಸಪೇಟೆಯಲ್ಲಿರುವ ತಮ್ಮ ಆ ಆಟದ ತಂಡದವರು, ಪರಿಷ್ಕೃತ 'ಗಿರಿಜಾಕಲ್ಯಾಣ'ವನ್ನು ದಿಲ್ಲಿ, ಮುಂಬೈ, ಬೆಂಗಳೂರು ಮುಂತಾದ ನಗರಗಳಲ್ಲಿ–ಮಹಾನಗರಗಳಲ್ಲಿ ಹಾಗೂ ಹಂಪಿ ಉತ್ಸವ, ಪಟ್ಟದಕಲ್ಲು ಉತ್ಸವ ಮೊದಲಾದ ಪ್ರತಿಷ್ಠಿತ ಸಾಂಸ್ಕೃತಿಕ ಉತ್ಸವಗಳಲ್ಲಿ ಪ್ರದರ್ಶಿಸಿ ಕಲಾಭಿಮಾನಿಗಳ, ವಿದ್ವಾಂಸರ ಮೆಚ್ಚುಗೆಯನ್ನು ಪಡೆದಿದ್ದಾರೆ.

ಜಾನಪದವನ್ನು ತಲಸ್ಪರ್ಶಿಯಾಗಿ ಅಧ್ಯಯನಿಸಲು ಇವೆಲ್ಲ ಅರ್ಹತೆಗಳ ಅನುಕೂಲ ಮಲಶೆಟ್ಟಿಯವರಿಗಿರುವುದರಿಂದ ಜಾನಪದ ಸಂಗ್ರಹ, ಸಂಪಾದನೆ, ಸಂಶೋಧನೆಗಳನ್ನು ಅತ್ಯಂತ ಸರಳವಾಗಿ ಮತ್ತು ನಿಖರವಾಗಿ ಮಾಡಲು ಸಾಧ್ಯವಾಗಿದೆ. ಆರ್.ಸಿ. ಹಿರೇಮಠ, ಎಂ.ಎಸ್. ಸುಂಕಾಪುರ, ಎಸ್.ಜಿ. ಇಮ್ರಾಪುರ, ಎಂ.ಎಂ. ಕಲಬುರ್ಗಿ, ಎಸ್.ಎಂ. ವೃಷಭೇಂದ್ರಸ್ವಾಮಿ, ಶಿವರಾಮ ಕಾರಂತ, ಬೆಟಗೇರಿ ಕೃಷ್ಣಶರ್ಮ, ಚಂದ್ರಶೇಖರ ಕಂಬಾರರಂಥವರ ಜಾನಪದದ ಬಗೆಗಿನ ಹೇಳಿಕೆಗಳನ್ನು ಒಪ್ಪಿಕೊಳ್ಳುವಾಗ ಅಥವಾ ತಿರಸ್ಕರಿಸುವಾಗ ಒರೆಗಲ್ಲಿಗೆ ಹಚ್ಚಿ, ಖಚಿತ ಅಭಿಪ್ರಾಯವನ್ನು ಮಂಡಿಸುವ ಎದೆಗಾರಿಕೆಯನ್ನು ಬೆಳೆಸಿಕೊಂಡಿದ್ದಾರೆ. ತನ್ನ ಹಿಂದಿನ ವಿದ್ವಾಂಸರು 'ಶ್ರೀಕೃಷ್ಣ ಪಾರಿಜಾತ ಸಣ್ಣಾಟಗಳ ರಾಜ'ನೆಂದು ಒಮ್ಮತ ವ್ಯಕ್ತಪಡಿಸಿದುದನ್ನು ಅಲ್ಲಗಳೆದು, ಅದೊಂದು ಸ್ವತಂತ್ರ ರಂಗಪ್ರಕಾರವೆಂದು, ಅದರ ವಿಶಿಷ್ಟ ಸಂಗೀತಗುಣದಿಂದ, ಇತರ ಸಣ್ಣಾಟಗಳಿಂದ ಪಾರಿಜಾತ ಹೇಗೆ ಭಿನ್ನವಾದುದೆಂಬುದನ್ನು ಸ್ಪಷ್ಟವಾಗಿ ಮೊಟ್ಟಮೊದಲು ಹೇಳಿದ್ದಾರೆ. ಅಂತೆಯೇ, 'ಕೌಜಲಗಿ ನಿಂಗವ್ವ ಬಯಲಾಟದ

ಪ್ರಥಮ ನಟಿ', 'ಯಕ್ಷಗಾನ ಮಧ್ಯಮ ವರ್ಗದವರ ಸೃಷ್ಟಿ', 'ಜನಪದ ನಾಟಕ ಅನುಕರಣ ಮೂಲವಾದದ್ದು' ಇತ್ಯಾದಿ ಹತ್ತಾರು ವಿಷಯಗಳನ್ನು ಮೊಟ್ಟಮೊದಲು ಸಾಧಾರಣವಾಗಿ ಬರೆದ ಪ್ರಥಮವರ್ಗದ ಜನಪದ ವಿದ್ವಾಂಸ ಮಲಶೆಟ್ಟಿ ಅವರು. (ಇತ್ತೀಚೆಗೆ – 'ಸ್ವರವಚನಗಳು'ಎಂದು ವಿದ್ವಾಂಸರು ಗುರುತಿಸುವ ಹಾಡುಗಳು ಶರಣರ ರಚನೆಗಳಲ್ಲವೆಂದು' ಆಧಾರ ಸಹಿತ ಬರೆದಿದ್ದಾರೆ). 'ಸಂಗ್ಯಾಬಾಳ್ಯ'ದಂಥ ಸಾಮಾಜಿಕ ಸಣ್ಣಾಟದ ಬಗೆಗೆ ತನ್ನದೇ ಖಚಿತ ನಿಲುವನ್ನು ಹೊಂದಿದ ಅವರ ಜನಪದ ಪ್ರತಿಭೆ–ಪಾಂಡಿತ್ಯ ಅನನ್ಯವಾದುದು. ಜನಪದದ ಯಾವುದೇ ವಿಷಯ ಸಂಗತಿ ಕುರಿತು ತನ್ನದೇ ಹೊಸ ಆಲೋಚನೆ, ಖಚಿತ ನಿಲುವು ಮತ್ತು ಸಹಜ ಒಲವು ಇರಿಸಿಕೊಂಡ ಜಿಲ್ಲೆಯ, ನಾಡಿನ ಮೂರನೇ ತಲೆಮಾರಿನ ಗಟ್ಟಿ ಜನಪದ ವಿದ್ವಾಂಸರು. ತನ್ನ ಹಿಂದಿನವರು ಬಂದು ನಿಂತಲ್ಲಿಂದ ಜಾನಪದ ಅಧ್ಯಯನವನ್ನು ಮುಂದುವರಿಸಿದ ಜಿಲ್ಲೆಯ ಪ್ರಥಮ ವರ್ಗದ ಜನಪದ ವಿದ್ವಾಂಸರು. ಎರಡನೇ ತಲೆಮಾರಿನವರೆಗೂ ಜನಪದ ಸಾಹಿತ್ಯಾಧ್ಯಯನ ಪ್ರಶಂಸೆಯ ಮಟ್ಟದಲ್ಲಿಯೇ ಇತ್ತು. ಈ ಪ್ರಶಂಸೆಯ ಮಟ್ಟದ ಅಥವಾ ಭಾವುಕತನದ ಜಾನಪದ ಅಧ್ಯಯನವನ್ನು ವೈಚಾರಿಕ ಮತ್ತು ವಿಮರ್ಶೆಯ ನೆಲೆಗೆ ತಿರುಗಿಸಿದವರಲ್ಲಿ ಕೂಡ ಒಬ್ಬರಾಗಿದ್ದಾರೆ.

ಉತ್ಸಾಹ, ಕ್ರಿಯಾಶೀಲತೆ ಮತ್ತು ಸೃಜನಶೀಲ ವ್ಯಕ್ತಿತ್ವ ಮಲಶೆಟ್ಟಿ ಅವರದು. ಈ 'ಉತ್ಸಾಹದ ಜತೆಗೆ ಪಾಂಡಿತ್ಯವನ್ನು, ಪಾಂಡಿತ್ಯದ ಸಂಗಡ ಪರಿಶ್ರಮ ಬುದ್ಧಿಯನ್ನು ಪ್ರಾಮಾಣಿಕತೆಯನ್ನು ವಿನಯವನ್ನು ಮೈಗೂಡಿಸಿಕೊಂಡಿದ್ದಾರೆಂದು ಕು.ಶಿ. ಹರಿದಾಸಭಟ್ಟರು ಮನದುಂಬಿ ಹೇಳಿದುದು ಅರ್ಥಪೂರ್ಣವಾದುದು. ಇವರ ಮೈಮನಗಳಲ್ಲಿ ಜಾನಪದವೇ ತುಂಬಿದೆ. ಜನಪದರ ಸರಳತೆ, ಸಜ್ಜನಿಕೆ, ಮುಗ್ಧತೆಗಳನ್ನು ಅಳವಡಿಸಿಕೊಂಡವರು; ಜನಪದರ ಕುರಿತು ಅಖಂಡ ಪ್ರೀತಿ, ಕಾಳಜಿ, ಅಭಿಮಾನ ರೂಢಿಸಿಕೊಂಡವರು. ಅಂತೆಯೇ ಮಲಶೆಟ್ಟಿಯವರ ಜನಪದ ಕುರಿತ ಮಾತುಗಳು ಗಂಭೀರವಾಗಿರುತ್ತವೆ. ಅವರ ಬರವಣಿಗೆ

ಗಟ್ಟಿಯಾಗಿರುತ್ತದೆ, ಅವರ ಸಂಶೋಧನೆ ಪ್ರಾಮಾಣಿಕವಾಗಿರುತ್ತದೆ, ವಿಮರ್ಶೆ ನಿಷ್ಪಕ್ಷವಾಗಿರುತ್ತದೆ, ಸಂಪಾದನೆ ಶಾಸ್ತ್ರೀಯವಾಗಿರುತ್ತದೆ, ಪರಿಷ್ಕರಣೆ ವ್ಯವಸ್ಥಿತವಾಗಿರುತ್ತದೆ. ಹೀಗಾಗಿ ಅವರ ಒಟ್ಟು ಜಾನಪದ ಅಧ್ಯಯನ ಮೌಲಿಕವಾಗಿರುತ್ತದೆ. ಹೊಸತನದಿಂದ ಕೂಡಿರುತ್ತದೆ. ಇದನ್ನು ಯಾರೂ ಗುರುತಿಸಬಹುದು.

ಮಲಶೆಟ್ಟಿ ಅವರು ೧೯೭೧ರಲ್ಲಿ ಧಾರವಾಡ ಕರ್ನಾಟಕ ಕಾಲೇಜಿನಲ್ಲಿ ಬಿ.ಎ. ಪದವಿ ೧೯೭೩ರಲ್ಲಿ ಕ.ವಿ.ವಿ.ದಿಂದ ಎಂ.ಎ. ಪದವಿ ಮತ್ತು ೧೯೭೮ರಲ್ಲಿ ಪಿಎಚ್.ಡಿ ಪದವಿಗಳನ್ನು ಪಡೆದುಕೊಂಡರು; ೧೯೭೩ರಲ್ಲಿಯೇ ಹೊಸಪೇಟೆಯ ವಿಜಯನಗರ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ ಸೇವೆಯನ್ನು ಆರಂಭಿಸಿದರು. ತಮ್ಮ ಅಧ್ಯಾಪನ ವೃತ್ತಿ, ಜಾನಪದ ಆಸಕ್ತಿಯ ಪ್ರವೃತ್ತಿಗಳ ಮೂಲಕ ಉತ್ತರಕರ್ನಾಟಕದ ಜಾನಪದ ವಿದ್ವಾಂಸರಲ್ಲಿ ತನ್ನದೇ ವಿಶಿಷ್ಟ ವ್ಯಕ್ತಿತ್ವದಿಂದ ಎದ್ದುಕಾಣುತ್ತಿರುವರು. ತಮ್ಮ ಅಧ್ಯಯನ-ಅಧ್ಯಾಪನದ ಜೊತೆಯಲ್ಲಿಯೇ ತಮಗೆ ಬಳುವಳಿಯಾಗಿ ಬಂದಿರುವ ಜನಪದ ಸಂಗೀತ, ಆಟ-ಬಯಲಾಟಗಳಲ್ಲಿ ತಮ್ಮನ್ನು ತಾವು ಕ್ರಿಯಾತ್ಮಕವಾಗಿ ತೊಡಗಿಸಿಕೊಂಡು ಅವುಗಳ ಮನರುಜ್ಜೀವನಕ್ಕೆ, ಪ್ರಚಾರ-ಪ್ರಸಾರಕ್ಕೆ ಅಹರ್ನಿಶಿ ಶ್ರಮಿಸುತ್ತ ಬಂದಿರುವ ಅವರು ಅಭಿನಂದನಾರ್ಹರು. ವಿಶ್ವವಿದ್ಯಾಲಯ, ಅಕಾಡೆಮಿಗಳು, ಸಾಹಿತ್ಯ ಪರಿಷತ್ತು, ಮಠಗಳು ಇತರ ಸಂಘ-ಸಂಸ್ಥೆಗಳು ಹಮ್ಮಿಕೊಂಡ ರಾಜ್ಯ ಮತ್ತು ರಾಷ್ಟ್ರಮಟ್ಟದ ಹಲವಾರು ವಿಚಾರಸಂಕಿರಣಗಳಲ್ಲಿ, ಸಮಾವೇಶಗಳಲ್ಲಿ, ಸಮ್ಮೇಳನಗಳಲ್ಲಿ ಭಾಗವಹಿಸಿ ಜನಪದ ಕಲೆ, ಸಂಗೀತ, ಸಾಹಿತ್ಯ, ಸಂಸ್ಕೃತಿ, ರಂಗಭೂಮಿ ಕುರಿತಾದ ನೂರಾರು ವಿದ್ವತ್‌ಪ್ರಬಂಧಗಳನ್ನು ಮಂಡಿಸಿ, ವಿದ್ವತ್‌ಪ್ರಪಂಚದಲ್ಲಿ ಮಿಂಚಿದ್ದಾರೆ. ಜಿಲ್ಲೆಯ, ನಾಡಿನ ಜನಪದ ವಿದ್ವತ್ ಪರಂಪರೆಯನ್ನು ಮುಂದುವರಿಸಿದ್ದಾರೆ. ಜಾನಪದ ಜಗತ್ತು, ಕರ್ನಾಟಕ ಭಾರತಿ, ಕನ್ನಡ ಅಧ್ಯಯನ, ಜಾನಪದ ಕರ್ನಾಟಕ ಯಾವುದೇ ಪತ್ರಿಕೆ ಇರಲಿ, ಅಲ್ಲೆಲ್ಲ ಜಾನಪದ ವಿಷಯಕವಾದ ಅಭ್ಯಾಸ ಪೂರ್ಣಲೇಖನಗಳನ್ನು ಪ್ರಕಟಿಸುವ ಮೂಲಕ ಜನಪದ ಸಾಹಿತ್ಯ ಸಿರಿ-ಸಮೃದ್ಧಿಯನ್ನು ಓದುಗರಿಗೆ

ತೆರೆದುತೋರಿದ್ದಾರೆ. ಈವರೆಗೆ ೨೦೦ಕ್ಕೂ ಮಿಕ್ಕಿ ಲೇಖನಗಳನ್ನು, ೪೦ ಮಿಕ್ಕಿ ಪುಸ್ತಕಗಳನ್ನು ಪ್ರಕಟಿಸಿ, ನಾಡಿನ ಹೆಸರಾಂತ ಜನಪದ ವಿದ್ವಾಂಸರೆಂದು ಗುರುತಿಸಲ್ಪಟ್ಟಿದ್ದರೂ ಅವರು ಎಲೆಯ ಮರೆಯ ಕಾಯಾಗಿಯೇ ಉಳಿಯಬೇಕೆನ್ನುವ ಹಂಬಲವುಳ್ಳವರು. ಅಗ್ಗದ ಪ್ರಚಾರಕೀರ್ತಿ ಅವರಿಗೆ ಒಗ್ಗದು. ಅಂತೆಯೇ ಅದಕ್ಕಾಗಿ ಎಂದೂ ಮುನ್ನುಗ್ಗುವವರಲ್ಲ. ಆದರೆ ಜಾನಪದಕ್ಕೆ ಸಂಬಂಧಿಸಿದ ಯಾವುದೇ ತಪ್ಪುಗ್ರಹಿಕೆ, ಸುಳ್ಳು ಹೇಳಿಕೆ, ಅಪ್ರಬುದ್ಧ ವಿಚಾರ ಯಾರಿಂದಲೇ ಬರಲಿ, ತಕ್ಷಣ ಪ್ರತಿಕ್ರಿಯಿಸಿ, ತಮ್ಮ ತಾರ್ಕಿಕ ನೆಲೆಯ, ಆಳವಾದ ಅಧ್ಯಯನದ ಪ್ರತಿಭೆ-ಪಾಂಡಿತ್ಯವನ್ನು ತೋರ್ಪಡಿಸದೆ ಬಿಟ್ಟವರಲ್ಲ. ತಮಗೆ ಕಂಡ ಸತ್ಯವನ್ನು ಹೇಳುವಲ್ಲಿ ಹಿಂಜರಿಯುವವರಲ್ಲ. ಅಂಥ ಛಾತಿಯನ್ನು ಎಳವೆಯಿಂದಲೇ ಬೆಳೆಸಿಕೊಂಡು ಬಂದವರು.

ಮಲಶೆಟ್ಟಿ ಅವರು ಗುಲಬರ್ಗಾ ವಿ.ವಿ.ಯ ಮೂವರು ಪಿಎಚ್.ಡಿ. ವಿದ್ಯಾರ್ಥಿಗಳಿಗೆ ಜನಪದ ವಿಷಯ ಸಂಶೋಧನ ಮಾರ್ಗದರ್ಶಕರಾಗಿದ್ದರು; ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳ ೧೨ ಪಿಎಚ್.ಡಿ. ಥಿಸಿಸ್ ಹಾಗೂ ೩ ಡಿಲಿಟ್ ಥೀಸಿಸ್‌ಗಳ ಮೌಲ್ಯಮಾಪಕರೂ ಆಗಿದ್ದರು. ಅಲ್ಲದೆ, ವಿವಿಧ ವಿಶ್ವವಿದ್ಯಾಲಯ ಮತ್ತು ಅಕಾಡೆಮಿಗಳ ಪುನರ್ಮನನ ಶಿಬಿರ, ಕಮ್ಮಟಗಳಿಗೆ ಸಂಪನ್ಮೂಲ ವ್ಯಕ್ತಿಯಾಗಿ ತಮ್ಮ ಜ್ಞಾನವನ್ನು ಹಂಚಿಕೊಂಡಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿ (೧೯೮೩-೧೯೮೯), ಕರ್ನಾಟಕ ಜಾನಪದ ಪರಿಷತ್ತು (೧೯೮೫-೨೦೦೧), ದಕ್ಷಿಣಮಧ್ಯ ಕೇಂದ್ರ, ನಾಗಪುರ (೧೯೯೭-೧೯೯೯), ಜನಪದ ರಂಗಕಲೆಗಳ ಅಧ್ಯಯನ ಕೇಂದ್ರ ಉಡುಪಿ (೧೯೮೬-೧೯೮೮), ಕನಾಟಕ ಸರಕಾರದ ಗುಬ್ಬೀ ವೀರಣ್ಣ ಪ್ರಶಸ್ತಿ ಆಯ್ಕೆ ಸಮಿತಿ (೨೦೦೩), ಕನಾಟಕ ಸರ್ಕಾರದ ಜಾನಪದಶ್ರೀ ಪ್ರಶಸ್ತಿ ಆಯ್ಕೆ ಸಮಿತಿ (೧೯೯೬).... ಗಳ ಸದಸ್ಯರಾಗಿ ಜನಪದ ಕಾರ್ಯಚಟುವಟಿಕೆಗಳನ್ನು ಸಮರ್ಥವಾಗಿ ನಿರ್ವಹಿಸಿ, ತಮ್ಮದೇ ಅಮೂಲ್ಯ ಕೊಡುಗೆಯನ್ನು ಈ ಕ್ಷೇತ್ರಕ್ಕೆ ನೀಡಿದ್ದಾರೆ. ೧೯೮೫ರಲ್ಲಿ ಉಡುಪಿಯ ಆರ್.ಆರ್.ಸಿ.ಯವರು ಗದಗದ ೧೯೮೮ರಲ್ಲಿ ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರದಲ್ಲಿ ಹಮ್ಮಿಕೊಂಡ ದೊಡ್ಡಾಟ ಕುಣಿತಗಳ

ಕಮ್ಮಟ, ಕರ್ನಾಟಕ ನಾಟಕ ಅಕಾಡೆಮಿ ಹಡಗಲಿ (೧೯೮೬) ಯಲ್ಲಿ ನಡೆಸಿದ ರಾಜ್ಯಮಟ್ಟದ ಜಾನಪದ ನಾಟಕೋತ್ಸವ, ಕನ್ನಡ ಸಾಹಿತ್ಯ ಪರಿಷತ್ತು ಹಡಗಲಿ (೧೯೯೫)ಯಲ್ಲಿ ನಡೆಸಿದ ರಾಜ್ಯಮಟ್ಟದ ದೊಡ್ಡಾಟ ಕಮ್ಮಟ ಇತ್ಯಾದಿಗಳ ಸಂಘಟನಾ ಕಾರ್ಯದರ್ಶಿಯಾಗಿ ಜನಪದ ಸೇವೆಗೈದುದು ಅನುಪಮ.

## ಜಾನಪದ ಕೃತಿಗಳು

ಅವರು, ಬಳ್ಳಾರಿ ಜಿಲ್ಲೆಯ ಜನಪದ ಕತೆಗಳು (೧೯೭೯), ಕೋಲಾಟದ ಪದಗಳು (೧೯೮೦), ಇಜಿಯಣ್ಣನ ಹಾಡು (೧೯೮೨), ಸೊಂಡೂರು ಕುಮಾರಸ್ವಾಮಿಯ ಹಾಡುಗಳು (೧೯೮೮), ಶ್ರೀಕೃಷ್ಣ ಪಾರಿಜಾತ (೧೯೯೯), ಮರಿಕಲ್ಲಕವಿಯ ಗೀಗೀ ಪದಗಳು (೨೦೦೧), ಇವೇ ಮುಂತಾದ ಕೃತಿಗಳನ್ನು ಸಂಪಾದಿಸಿ, ಅಭ್ಯಾಸಪೂರ್ಣ ಪ್ರಸ್ತಾವನೆಯೊಂದಿಗೆ, ಪ್ರಕಟಿಸಿದ್ದಾರೆ. ಕನ್ನಡ ಜನಪದ ಕಾವ್ಯದಲ್ಲಿ ಭಕ್ತಿಯ ನಿರೂಪಣೆ (೧೯೮೨), ಉತ್ತರ ಕರ್ನಾಟಕದ ಬಯಲಾಟಗಳು (೧೯೮೩), ಉತ್ತರ ಕರ್ನಾಟಕದ ಜನಪದ ವಾದ್ಯಗಳು (೧೯೮೭), ಸ್ವಾತಂತ್ರ್ಯಹೋರಾಟ ಮತ್ತು ಲಾವಣಿ ಸಾಹಿತ್ಯ (೧೯೮೮), ಉತ್ತರ ಕರ್ನಾಟಕದ ರಂಗಗೀತೆಗಳು, ಚಂದ್ರಶೇಖರ ಕಂಬಾರ, ಜೋಳದ ರಾಶಿ ದೊಡ್ಡನಗೌಡರು, ಇತ್ಯಾದಿ ಮಹತ್ವದ ಕೃತಿಗಳನ್ನು ರಚಿಸಿ ಜನಪದ ಕ್ಷೇತ್ರಕ್ಕೆ ಕೊಡುಗೆಯಾಗಿತ್ತಿದ್ದಾರೆ.

ಬಸವರಾಜ ಮಲಶೆಟ್ಟಿ ಅವರು ತಮ್ಮ 'ಉತ್ತರ ಕರ್ನಾಟಕದ ಜನಪದ ವಾದ್ಯಗಳು' – ಸಂಶೋಧನ ಪುಸ್ತಿಕೆಯಲ್ಲಿ ಕರ್ನಾಟಕ ಜನಪದ ವಾದ್ಯಗಳ ವೈಶಿಷ್ಟ್ಯ, ಉಗಮ, ವಿಕಾಸ, ವ್ಯಾಕರಣ, ಪ್ರಭಾವಗಳನ್ನು ಗುರುತಿಸಿದ್ದಾರೆ. ಸಂಗೀತ ಶಾಸ್ತ್ರದ ಪ್ರಾಚೀನ ಕಾವ್ಯ–ಶಾಸನಗಳಲ್ಲಿ, ಶಿಲ್ಪಗಳಲ್ಲಿ ಉಲ್ಲೇಖಗೊಂಡಿರುವ ವಾದ್ಯಗಳೊಂದಿಗೆ ಜನಪದ ವಾದ್ಯಗಳನ್ನು ತೌಲನಿಕವಾಗಿ ಅಭ್ಯಸಿಸಿದ್ದಾರೆ. ಈ ವಾದ್ಯಗಳ ಪ್ರಾದೇಶಿಕ ವೈಶಿಷ್ಟ್ಯವನ್ನು ಗುರುತಿಸಿದ್ದಾರೆ. ಉತ್ತರ ಕರ್ನಾಟಕದ ಶ್ರೀಮಂತ ಜಾನಪದ ವಾದ್ಯವಾದ 'ಕರಡಿ'ಯ ಮಹತ್ವ–ವೈಶಿಷ್ಟ್ಯಗಳನ್ನು ದಾಖಲಿಸುವ ಪ್ರಾಮಾಣಿಕ ಪ್ರಯತ್ನಮಾಡಿದ್ದಾರೆ; ವಾದ್ಯಗಳ

ಗುಣ-ಪ್ರಭಾವ, ಲೋಪದೋಷಗಳನ್ನು ಕಂಡುಕೊಂಡಿದ್ದಾರೆ. ಹಲಗೆ, ಡೊಳ್ಳು, ಸಂಬಳ, ಡಪ್ಪು ಮುಂತಾದ ವಾದ್ಯಗಳ ಬಗೆಗೆ ತಾನು ಹೇಳಿದ್ದೇ ಅಂತಿಮ ಸತ್ಯ ಎನ್ನುವ ಹಠ ಈ ವಿದ್ವಾಂಸರಿಗಿದ್ದಂತಿಲ್ಲ. ಇವುಗಳ ಗುಣ-ದೋಷಗಳ ಬಗೆಗೆ ಮುಕ್ತವಾದ ಚರ್ಚೆನಡೆಯಬೇಕೆನ್ನುತ್ತಾರೆ.

ಬಳ್ಳಾರಿ ತಾಲ್ಲೂಕಿನ ಜೋಳದ ರಾಶಿ ಗ್ರಾಮದ, ಕನ್ನಡನಾಡು ಕಂಡ ಅಪರೂಪದ ಕಲಾವಿದ, ಕವಿ, ಗಮಕಿ, ನಟ, ಪ್ರವಚನಕಾರ ಡಾ। ಜೋಳದರಾಶಿ ದೊಡ್ಡನಗೌಡರ ಜೀವನಚರಿತ್ರೆ (೨೦೦೫)ಯನ್ನು ಕಥನ ಶೈಲಿಯಲ್ಲಿ ತುಂಬ ಸೊಗಸಾಗಿ ಬರೆದಿದ್ದಾರೆ ಮಲಶೆಟ್ಟಿಯವರು. ಕೆಂಗಲ್ಲು ದೊಡ್ಡನಗೌಡರು ಜೋಳದ ರಾಶಿ ದೊಡ್ಡನಗೌಡರಾಗಿ ಹೆಸರು ಮಾಡುವುದರ ಮೂಲಕ ತಮ್ಮ ಹುಟ್ಟೂರು ಜೋಳದರಾಶಿಯನ್ನು ನಾಡಿನ ಸಾಂಸ್ಕೃತಿಕ ನಕ್ಷೆಯಲ್ಲಿ ಅಜರಾಮರಗೊಳಿಸಿದುದನ್ನು ಈ ಗ್ರಾಮೀಣ ಪ್ರತಿಭೆಯ ಸಾಧನೆ-ಜನಪ್ರಿಯತೆಗಳನ್ನು ಹಿಂಜಿಹಿಂಜಿ ಓದುಗರ ಮುಂದಿಟ್ಟಿದ್ದಾರೆ. 'ಜೋಳದ ರಾಶಿ' ಅಚ್ಚದೇಸೀ ಪ್ರತಿಭೆ-ಸಾಂಸ್ಕೃತಿಕ ವಿಸ್ತಾರಕ್ಕೆ ಸಂಕೇತ-ಎಂಬಂಥ ಧ್ವನಿಪೂರ್ಣ ಮಾತುಗಳು ಈ ಕೃತಿಯ ಬಹುಭಾಗದಲ್ಲಿ ದೊರಕುವುದು ಮಲಶೆಟ್ಟಿಯವರ ಬರವಣಿಗೆಯ ಪಕ್ವತೆಗೆ ನಿದರ್ಶನ. ಮೊಗ್ಗು ಹೂವಾದ ಪರಿ; ಬಣ್ಣದ ಬದುಕು, ಅರಳಿ ಬೆಳೆದ ಗಮಕಿ, ಬಯಲ ಗಳಿಕೆಗಳು, ಅಂಕಪರದೆ ಇಳಿಯಿತು.... ಇತ್ಯಾದಿ ಸೊಗಸಾದ ತಲೆಬರಹಗಳ ಅಡಿಯಲ್ಲಿ ಅವರ ಜೀವನ ಪರಿಚಯ-ವಿವಿಧ ಮುಖದ ಸಾಧನೆ-ಸಿದ್ಧಿಗಳನ್ನು ಅತ್ಯಂತ ಸರಳ ಮತ್ತು ಸುಂದರ ಭಾಷೆಯಲ್ಲಿ ಹಿಡಿದಿಟ್ಟ ಮಲಶೆಟ್ಟಿಯವರು ಉತ್ತಮ ಚರಿತ್ರಕಾರರಾಗಿ ತೋರಿಬರುತ್ತಾರೆ.

ತಮ್ಮ "ಸ್ವಾತಂತ್ರ್ಯ ಹೋರಾಟ ಮತ್ತು ಲಾವಣಿ ಸಾಹಿತ್ಯ" ಪುಸ್ತಿಕೆಯಲ್ಲಿ -'ಲಾವಣಿ' ಮಹಾರಾಷ್ಟ್ರದಿಂದ ನಮ್ಮಲ್ಲಿಗೆ ಬಂದುದು ನಿರ್ವಿವಾದ... ಇದು ಗಡಿಪ್ರದೇಶವಾದ ಬೆಳಗಾವಿ, ಧಾರವಾಡ, ವಿಜಾಪುರ, ಬಾಗಲಕೋಟೆ, ಗುಲಬರ್ಗ ಮತ್ತು ಬೀದರ ಜಿಲ್ಲೆಗಳಲ್ಲಿ ಹೆಚ್ಚು ಪ್ರಚಾರದಲ್ಲಿರುವ ಜನಪ್ರಿಯ ಗೀತ ಪ್ರಕಾರವೆಂದು ಹೇಳಿ 'ಲಾವಣಿ' ಶಬ್ದದ ನಿಷ್ಪತ್ತಿ-ಇತಿಹಾಸ, ರೂಪ-

ಸ್ವರೂಪ ಕುರಿತು ಚರ್ಚಿಸಿದ್ದಾರೆ. 'ಲಾವಣಿ'-ಶೃಂಗಾರ, ವೀರ, ಆಧ್ಯಾತ್ಮ ವಸ್ತುವನ್ನೊಳಗೊಂಡಂಥದ್ದು. ಇದು ತಮಾಶಾದ ಒಂದು ಮುಖ್ಯ ಅಂಗವಾಗಿ ಬೆಳೆದಿದೆ ಎಂದೆಲ್ಲ ಹೇಳುತ್ತ ಮಲಶೆಟ್ಟಿ ಅವರು 'ಲಾವಣಿ ಸಂಗೀತ ಅಚ್ಚ ಜನಪದ ಸಂಗೀತವಲ್ಲ; ಅದು ಮಾರ್ಗ-ದೇಸೀ ಗುಣಾಂಶಗಳ ಹೃದ್ಯ ಸಮ್ಮಿಶ್ರಣವಾಗಿದೆ. ಲಾವಣಿ ೧೮೩೦ ರಿಂದೀಚೆಗೆ ಕನ್ನಡದಲ್ಲಿ ಬೆಳೆದುಬಂದಿದೆ. ಫ್ಲೀಟರು ಸಂಗ್ರಹಿಸಿದ ಸಂಗೊಳ್ಳಿರಾಯಣ್ಣನ ಲಾವಣಿಯೇ ಈಗ ಉಪಲಬ್ಧವಿರುವ ಪ್ರಾಚೀನ ಲಾವಣಿ. ಇದನ್ನು ಬರೆದ ಹೆಬ್ಬಳ್ಳಿ ಪುಂಡಬಸವನೇ ಸಧ್ಯಕ್ಕೆ ಕನ್ನಡದ ಮೊದಲ ಲಾವಣಿಕಾರ. ಲಾವಣಿ > ಗೀಗೀಯಾದುದರ ಕಾರಣ-ಲಾವಣಿ ಮೇಳ-ಗೀಗೀಮೇಳ, ಅವುಗಳ ಪ್ರಮುಖರು, ಇತ್ಯಾದಿ ಸಂಕ್ಷಿಪ್ತವಾಗಿಂವಾದರೂ ಖಚಿತವಾಗಿ ಗುರುತಿಸುತ್ತಾರೆ. ಸ್ವಾತಂತ್ರ್ಯಾಂದೋಲನದ ಸಂದರ್ಭದಲ್ಲಿ ಲಾವಣಿ > ಗೀಗೀಗಳು ಜನತೆಯಲ್ಲಿ ಸ್ವಾತಂತ್ರ್ಯ-ಸ್ವಾಭಿಮನದ ಕಿಚ್ಚನ್ನು ತುಂಬಿದುದನ್ನು ಉದಾಹರಣೆ ಸಮೇತ ವಿಶ್ಲೇಷಿಸಿದ್ದಾರೆ. ಚಿಕ್ಕದಾಗಿ ಚೊಕ್ಕವಾಗಿ ಬರೆಯುವುದು ಅವರ ವೈಶಿಷ್ಟ್ಯವೇ ಆಗಿದೆ.

ಶಿಷ್ಟ-ಜಾನಪದ ಮತ್ತು ಸಂಶೋಧನ ಕ್ಷೇತ್ರಗಳತ್ತ ಒಲವಿರುವ ಬ.ಮ. ಅವರು, ಅದೇ ಕ್ಷೇತ್ರಗಳತ್ತ ವಿಶೇಷ ಒಲವಿರುವ ಡಾ। ಚಂದ್ರಶೇಖರ ಕಂಬಾರರ ಬದುಕಿನ ಪರಿಚಯವನ್ನು ದೇಸೀನೆಲೆಯ ಅವರ ಸೃಜನಕೃತಿಗಳನ್ನು ಕುರಿತು ಆತ್ಮೀಯವಾಗಿ ಮತ್ತು ವಸ್ತುನಿಷ್ಠವಾಗಿ ತಮ್ಮ 'ಚಂದ್ರಶೇಖರ ಕಂಬಾರ'-ಕೃತಿಯಲ್ಲಿ ಚರ್ಚಿಸಿದ್ದಾರೆ. ಕಂಬಾರರ ಸಾಧನೆ-ಸಿದ್ಧಿಗಳ ಬಗೆಗೆ ಹೆಮ್ಮೆ ತಳೆದ ಮಲಶೆಟ್ಟಿ ಅವರು ವಸ್ತುನಿಷ್ಠ ವಿಮರ್ಶೆಯ ಒರೆಗಲ್ಲಿಗೆ ಅವರ ಕಾವ್ಯ-ನಾಟಕ ಕಾದಂಬರಿಗಳನ್ನು ಒಡ್ಡಿ ಯಶಸ್ವೀ ಗ್ರಂಥ ಬರೆದಿದ್ದಾರೆ. "ಕಂಬಾರರ ತಲೆಮಾರಿನಲ್ಲಿ ಅವರಷ್ಟು ಗ್ರಾಮೀಣ ಜೀವನದ ಆಪ್ತ ಅನುಭವಗಳನ್ನು ಹೀರಿಕೊಂಡು ಬೆಳೆದವರು ಮತ್ತೊಬ್ಬರಿಲ್ಲ. ಕಂಬಾರರು ಅನುಭವಿಸಿದ ಬಡತನ ಅನಾನುಕೂಲತೆಗಳು ಲೋಕಾನುಭವಕ್ಕೆ, ಜೀವನಶ್ರದ್ಧೆಗೆ ವ್ಯಕ್ತಿತ್ವದ ನಿರ್ಮಾಣಕ್ಕೆ ಪೂರಕವಾದುವು. ಆದ್ದರಿಂದ ಅವರ ಬರೆಹಗಳಲ್ಲಿ ಅಚ್ಚ

ಜಾನಪದೀಯ ಅನುಭವಗಳು ಸಾಂದ್ರಗೊಂಡಿವೆ" ಎಂದು ಅಭಿಪ್ರಾಯಿಸಿದ್ದು ಸಮುಚಿತವಾದುದು. ಇವರು ಜನಪದ ಕಾವ್ಯದ ತಾಯಿಬೇರಿನಿಂದ ಚಿಗಿತು ಚಿಗುರಾದುದು ಆಕಸ್ಮಿಕ ವಿದ್ಯಮಾನ. ಇವರ ಕಾವ್ಯದ ಸೆಲೆ ಜನಪದ ಪರಂಪರೆಯಲ್ಲಿದೆ. ಜನಪದ-ನವ್ಯ-ಭಾವಗೀತೆ ಈ ಮೂರು ಕಾವ್ಯಪ್ರಕಾರಗಳಲ್ಲಿಯ ಕಂಬಾರರ ಸಿದ್ಧಿ ವಿಶಿಷ್ಟವಾದುದು. ಒಟ್ಟಿನಲ್ಲಿ ಕನ್ನಡ ಕಾವ್ಯ-ನಾಟಕ-ಕಾದಂಬರಿ ಜಾನಪದ ಕ್ಷೇತ್ರಗಳಲ್ಲಿ ಕಂಬಾರರ ಸ್ಥಾನ ಅನನ್ಯವಾದುದನ್ನು ಸಾಧಾರವಾಗಿ ಮಲಶೆಟ್ಟಿ ಅವರು ಈ ಕೃತಿಯಲ್ಲಿ ನಿರೂಪಿಸುವುದರ ಮೂಲಕ ಒಬ್ಬ ಶ್ರೇಷ್ಠ ವಸ್ತುನಿಷ್ಠ ನಿಮರ್ಶಕರೆನಿಸಿದ್ದಾರೆ. ಕಂಬಾರರ ಬಹುಮುಖೀ ವ್ಯಕ್ತಿತ್ವವನ್ನು ಸರಿಯಾಗಿ ಗ್ರಹಿಸಿ, ಅರ್ಥಪೂರ್ಣವಾಗಿ ನಿರೂಪಿಸಿದ ಈ ಗ್ರಂಥ ಓದಲೇಬೇಕಾದಂಥದು. ಮಲಶೆಟ್ಟಿಯವರ 'ಗದ್ಯದ ಮಾದರಿ'ಯನ್ನು ಇದರಲ್ಲಿ ನೋಡಬಹುದು; ಇವರ ಭಾಷೆ, ಶೈಲಿ, ವಿಮರ್ಶೆಯ ಗುಣಗಳೆಲ್ಲ ಸರಳವಾಗಿವೆ, ಗಂಭೀರವಾಗಿವೆ, ಮೌಲಿಕವಾಗಿವೆ ಮತ್ತು ಪರಿಣಾಮಕಾರಿಯಾಗಿವೆ. ಬಳ್ಳಾರಿ ಜಿಲ್ಲೆಯ ಸೊಂಡೂರಿನ ಶ್ರೀ ಕುಮಾರಸ್ವಾಮಿಯನ್ನು ಕುರಿತ ಭಜನೆಹಾಡುಗಳ ಸಂಗ್ರಹ "ಸೊಂಡೂರು ಶ್ರೀ ಕುಮಾರಸ್ವಾಮಿ ಜಾನಪದ ಹಾಡುಗಳು". ಸೊಂಡೂರಿನಲ್ಲಿ ಕುಮಾರಸ್ವಾಮಿಯ ದೇವಾಲಯವಿದೆ. ಇದು ಪುರಾಣ ಪ್ರಸಿದ್ಧ ಕ್ಷೇತ್ರವೂ ಆಗಿದೆ. ಸೊಂಡೂರಿನ ಸುತ್ತಮುತ್ತ ಕುಮಾರಸ್ವಾಮಿಯ ಅಪಾರ ಭಕ್ತರಿದ್ದಾರೆ. ಈತನ ಬಗೆಗೆ ಸಹಜವಾದ ಭಕ್ತಿಭಾವ ತಾಳಿದ ಜನ ಹಾಡುಕಟ್ಟಿ ಹಾಡಿದ್ದಾರೆ. ಇಲ್ಲಿರುವ ಭಜನಾಮೇಳದವರು ತಮ್ಮ ಇತರ ಭಜನೆಹಾಡುಗಳ ಜೊತೆಗೆ ಕುಮಾರಸ್ವಾಮಿಯನ್ನು ಕುರಿತ ಹಾಡುಗಳನ್ನು ಭಜನೆಯಲ್ಲಿ ಹಾಡುತ್ತ ಬಂದಿದ್ದಾರೆ. ಈ ಹಾಡುಗಳನ್ನು ಇಲ್ಲಿ ಮಲಶೆಟ್ಟಿ ಅವರು ಸಂಪಾದಿಸಿದ್ದಾರೆ. ಈ ಸ್ವಾಮಿಯ ಭಕ್ತರು ಆತನನ್ನು ಕುರಿತು ರಚಿಸಿದ ಹಾಡುಗಳಲ್ಲಿರುವ ಪ್ರಾಸ, ನಿಷ್ಠೆ, ಪೌರಾಣಿಕ ಅಂಶಗಳ, ಶಬ್ದ ಸಂಪತ್ತನ್ನು ಗಮನಿಸಿ, ಸಂಗ್ರಹಿಸಲು ಯೋಗ್ಯವೆಂದು ತೀರ್ಮಾನಿಸಿ ಅಚ್ಚುಕಟ್ಟಾಗಿ ಸಂಗ್ರಹಿಸಿದ್ದಾರೆ. ಇಲ್ಲಿ ಹಾಡುಗಳ ಭಾಷೆಯಲ್ಲಿ ಗ್ರಾಂಥಿಕತೆ ದಟ್ಟವಾಗಿರುವುದರಿಂದ, ಇವನ್ನು 'ಅರೆಜಾನಪದ'ವೆಂದು

ಮಲಶೆಟ್ಟಿ ಅವರು ಗುರುತಿಸಿದುದು ಅವರ ಜಾನಪದ ಅಧ್ಯಯನದ ಸೂಕ್ಷ್ಮತೆಗೊಂದು ಚಿಕ್ಕ ನಿದರ್ಶನ. ಆದರೆ ಭಜನೆಹಾಡುಗಳ ರಚನೆ ಶಿಷ್ಟರೂಪದಲ್ಲಿಯೇ ಇದೆ. ಇವು ಸಂಪೂರ್ಣವಾಗಿ ಜಾನಪದವೆಂದು ಹೇಳುವುದು ಕಷ್ಟ. ಸಾಹಿತ್ಯ ಮತ್ತು ಸಂಗೀತವನ್ನು ಒಳಗೊಂಡ ಈ ಹಾಡುಗಳು ದೇಸೀಯತೆಯನ್ನು ಅರಗಿಸಿಕೊಂಡಿವೆ. ಕುಮಾರಸ್ವಾಮಿಯ ವೈಭವ, ಮಹಾತ್ಮೆ, ಸಾಹಸಾದಿಗಳನ್ನು ಇಲ್ಲಿಯ ಹಾಡುಗಳು ನಿರೂಪಿಸಿವೆ. ಭಕ್ತನ ನಿಷ್ಠೆ, ಆರ್ತಭಾವ, ಪ್ರೀತಿ, ಸಮರ್ಪಣ ಭಾವಗಳು ಈ ಹಾಡುಗಳಲ್ಲಿ ಹಾಸುಹೊಕ್ಕಾಗಿವೆ.

ಹಾಗೆ ನೋಡಿದರೆ, ಜನಪದ ಹಾಡು ಸಾಹಿತ್ಯ ಸಂಗೀತಗಳೆರಡನ್ನೂ ಒಳಗೊಂಡಿರುತ್ತದೆ. ಆದರೆ ನಮ್ಮ ಜನಪದ ಸಂಗ್ರಾಹಕರು ಜನಪದ ಹಾಡುಗಳ ಸಾಹಿತ್ಯವನ್ನು ಮುದ್ರಿಸುತ್ತ, ಸಂಗೀತವನ್ನು ಅಲಕ್ಷಿಸಿದುದಕ್ಕೆ ವಿಷಾದಪಟ್ಟ ಮಲಶೆಟ್ಟಿ ಅವರು. ಇಲ್ಲಿ ಸಾಹಿತ್ಯದ ಜತೆಗೆ ಅದರ ಸಂಗೀತವನ್ನು ಹಿಡಿದಿಡಲು ಪ್ರಯತ್ನಿಸಿದ್ದು ವಿಶೇಷವಾಗಿದೆ. ಇಲ್ಲಿಯ ಪ್ರತಿಯೊಂದು ಹಾಡಿಗೆ ಸ್ವರಪ್ರಸ್ತಾರ ಹಾಕಿ ಮುದ್ರಿಸಿದುದು ಹಾಡಿನ ಸಂಗೀತ ಅರಿಯಲು ಸಹಾಯಕವಾಗಿದೆ. ಇದನ್ನು ಕರ್ನಾಟಕದ ಯಾವುದೇ ಜಾನಪದ ಸಂಗ್ರಾಹಕ ಗಮನಿಸಿದಂತಿಲ್ಲ, ಮಾಡಿದಂತಿಲ್ಲ. ಈ ಸ್ವರಪ್ರಸ್ತಾರದ ಹೊಸ ಪ್ರಯೋಗ ನಮ್ಮಲ್ಲಿ ಮಲಶೆಟ್ಟಿ ಅವರೇ ಆರಂಭಿಸಿದಂತೆ ತೋರುತ್ತದೆ. ಆದರೆ ಈ ಬಗೆಗೆ ಸಂಗೀತ ಬಲ್ಲವರಾರೂ ಯಾವುದೇ ಪ್ರತಿಕ್ರಿಯೆಯನ್ನು ಈವರೆಗೆ ವ್ಯಕ್ತಪಡಿಸದೇ ಇದ್ದುದು ಆಶ್ಚರ್ಯ.

ಸೊಂಡೂರಿನ ಶ್ರೀ ಕಾರ್ತಿಕೇಯ ಕ್ಷೇತ್ರ ಕುರಿತು ಮತ್ತು ಸಂಗ್ರಹಿಸಿದ ಹಾಡುಗಳ ಕುರಿತು ಸಂಕ್ಷಿಪ್ತವಾದರೂ ಮೌಲಿಕವಾದ ಮುನ್ನುಡಿಯನ್ನು ಮಲಶೆಟ್ಟಿ ಬರೆದುದು ಪುಸ್ತಕ ಓದುಗರಿಗೆ ಸಹಾಯಕವಾಗಿದೆ. ಆದರೆ ಇವು ಭಜನೆ ಹಾಡುಗಳಾದ್ದರಿಂದ ಭಜನೆ ಕುರಿತಾದ ವಿವರಣೆಯ ಅಗತ್ಯವಿತ್ತೆಂದು ತೋರುತ್ತದೆ. "ಉತ್ತರ ಕರ್ನಾಟಕದ ಭಜನೆಹಾಡುಗಳು'–ಲೇಖನವನ್ನು ಬೇರೊಂದೆಡೆ ಬರೆದಿದ್ದಾರೆ. ಆ ಮಾತು ಬೇರೆ. ಸಂಗೀತದ ಮೂಲಕ

ಜನಪದವನ್ನು ನೋಡಬಯಸಿದ ಲೇಖಕರು ತಮ್ಮ 'ಉತ್ತರ ಕನಾಟಕದ ರಂಗಗೀತೆಗಳು' ಪುಸ್ತಕದಲ್ಲಿಯೂ ಹಾಡುಗಳಿಗೆ ಸಂಗೀತದ ಸ್ವರಪ್ರಸ್ತಾರ ಹಾಕಿದ್ದಾರೆ. ಸ್ವರಗುರುತಿಸುವಿಕೆಯ ಈ ಕ್ರಮ(ನೊಟೇಶನ್) ಪಾಶ್ಚಾತ್ಯರಿಂದ ಬಂದಿರಬಹುದಾಗಿದೆ. ಇದು ಧಾಟಿಯನ್ನು ಹಿಡಿದಿಡುವ ಕ್ರಮವೂ ಹೌದು. ಈ ಗ್ರಂಥಗಳನ್ನು ಓದಿ ಅನೇಕರು ಧಾಟಿ ಕಲಿತಿರುವ ಸಾಧ್ಯತೆಯಿದೆ.

ಹಾಡುಗಳನ್ನು ಹಾಡಿತೋರಿಸಿದ ವಕ್ತೃಗಳ ಹೆಸರನ್ನು ಕೊನೆಗೆ ದಾಖಲಿಸಿದ್ದಾರೆ. 'ಕಣ್ಣು ತೆರೆದುನೋಡೊ ದೊರೆಯೆ', 'ಅಮಿತ ಬ್ರಹ್ಮಾಂಡಕೆ ಈಶಾ ಪಾಹಿಮಾಂ ಪಾರ್ವತಿ ಕುಮಾರಾ', 'ಬಂದೆ ನಿಮ್ಮ ಚರಣದಡಿಗೆ', 'ನಿನ್ನ ನಂಬಿದೆನು ನಾನು', 'ಈತನೆ ಜಗದಾದಿ ವಂದ್ಯನು', 'ಕಂಡೆನು ಷಣ್ಮುಖರಾಯನಾ', 'ಯಾರು ಬಿಟ್ಟರೆ ಕೈಯ್ಯಾ' 'ನೌಲಾನೇರಿದ ಅವನಿಪನ್ಯಾರ', 'ನೆನೆವೆ ಮುನಿಘನ ವಂದ್ಯ', 'ಪೇಚಿಗೆ ಸಿಲುಕಿದೆನೊ', 'ಎನಿತು ನಾನೇನು ಪುಣ್ಯವ ಮಾಡಿದೆನೊ', 'ಎಂಥವನೆಂಥವನೆ', 'ಬಂದೆನು ನಿಮ್ಮಡಿಗೆ', 'ಹೋಗಿ ನೋಡೋಣು ಬನ್ನಿ', 'ನಿನ್ನ ನೋಡಿ ಧನ್ಯನಾದೆನು', 'ತೂಗುವಾ ನಂದನ', 'ಜಯಮಂಗಳಂ', 'ಲಾಲಿ ಲಕ್ಷ್ಮೀಶ ಸಖನಾತ್ಮಜ'–ಹೀಗೆ, ಒಟ್ಟು ೧೯ ಭಜನಾ ಹಾಡುಗಳನ್ನು ಸ್ವರಪ್ರಸ್ತಾರ ಸಹಿತ ಪ್ರಸ್ತುತ ಗ್ರಂಥದಲ್ಲಿ ಸಂಪಾದಿಸಿದ್ದಾರೆ. ಈ ಹಾಡುಗಳ ಶಿರೋನಾಮೆ ಹಾಡುಗಳ ಮೊದಲ ಸಾಲುಗಳಾಗಿವೆ. ಹಾಡುಗಳಿಗೆ ಶೀರ್ಷಿಕೆಗಳಿಲ್ಲ. ಪರಿವಿಡಿಯಲ್ಲಿ ಮಾತ್ರ ಉಲ್ಲೇಖಿಸಿದ್ದಾರೆ.

**"ಇಜಯಣ್ಣನ ಹಾಡು"** (೧೯೮೨)– ಒಂದು ಜನಪದ ಖಂಡಕಾವ್ಯ (ಜನಪದ ಕಥನಗೀತೆ). ಪ್ರಣಯ, ತ್ಯಾಗ, ಪಶ್ಚಾತ್ತಾಪಗಳ ಸುತ್ತ ಹೆಣೆಯಲ್ಪಟ್ಟ ಪ್ರಸ್ತುತ ಹಾಡ್ಗತೆಯನ್ನು ಮಲಪನಗುಡಿ (ಹೊಸಪೇಟೆ ಸಮೀಪದ ಹಳ್ಳಿ)ಯ ಶ್ರೀಮತಿ ಕಟುಗರ ಎಲ್ಲಮ್ಮನಿಂದ ಮಲಶೆಟ್ಟಿ ಅವರು ಸಂಗ್ರಹಿಸಿದ್ದಾರೆ. ಇಜಯಣ್ಣ ಹಾಡು–ನೀಳ್ಗತೆಯಲ್ಲಿ ನಿರೂಪಿತವಾದ ಕತೆಯನ್ನು, ಗದ್ಯದಲ್ಲಿ ಸ್ಥೂಲವಾಗಿ ಹೇಳಿ, ಹಾಡ್ಗತೆಯಲ್ಲಿಯ ಕಾವ್ಯಾಂಶ–ಪಾತ್ರಗಳ ಪರಿಚಯ–ಛಂದಸ್ಸು ಇತ್ಯಾದಿ ಗುರುತಿಸುವ ಮೂಲಕ, ಅದರಲ್ಲಿಯ ಸಾಮಾಜಿಕ ಹಾಗು ಸಾಂಸ್ಕೃತಿಕ ಮೌಲ್ಯಗಳನ್ನು ಸಂಪಾದಕರು ಪ್ರಸ್ತಾವನೆಯಲ್ಲಿ ಎತ್ತಿತೋರಿಸುವ ಪ್ರಮಾಣಿಕ

ಪ್ರಯತ್ನಮಾಡಿದ್ದಾರೆ. ಆದರೆ "ಜಾನಪದ ಕಥನಗೀತೆ"ಯ ಸ್ವರೂಪ ಹಿನ್ನೆಲೆಯೂ ಇಲ್ಲಿ ಅಗತ್ಯವಿತ್ತು. ಆ ಕಡೆಗೆ ಯಾಕೋ ಲೇಖಕರು ಗಮನಹರಿಸಿದಂತೆ ತೋರುವುದಿಲ್ಲ. ಕೊನೆಯಲ್ಲಿ ಓದಿನ ಅನುಕೂಲತೆಗಾಗಿ ಕೆಲವು ಪದಗಳ ಅರ್ಥನೀಡಿದ್ದಾರೆ. ಇಷ್ಟು ದೀರ್ಘವಾದ ಹಾಡನ್ನು ಹೇಳಿದ ಕಟುಗರ ಎಲ್ಲಮ್ಮನ ಭಾವಚಿತ್ರ ಇದೆಯಾದರೂ ಅವಳ ಪರಿಚಯ ಇಲ್ಲದುದು ಕೊರತೆಯೆನಿಸುತ್ತದೆ. ಈ ನೀಳ್ಗತೆಯನ್ನು ಎರಡೆರಡು ಸಾಲುಗಳಂತೆ ಸಂಯೋಜಿಸಿದ್ದಾರೆ. ಎರಡು ಸಂದುಗಳಲ್ಲಿ ಈ ಹಾಡ್ಗತೆಯಿದೆ.

ಇಲ್ಲಿಯ ಕಥಾನಾಯಕ ಇಜಿಯಣ್ಣ ಒಬ್ಬ ಉತ್ಕಟಪ್ರೇಮಿ. ಧರ್ಮಪತ್ನಿ ರುಕ್ಮಿಣಿಯನ್ನು ಮರೆತು ಎಲ್ಲಾಣಿ ಸೂಳೆಯೊಂದಿಗೆ ತನ್ನ ತಾರುಣ್ಯವನ್ನು ಕಳೆಯುತ್ತಾನೆ. ತನ್ನನ್ನು ಪ್ರೀತಿಸುವ ಈ ಸೂಳೆ ತನ್ನೊಂದಿಗೆ ಕಿಚ್ಚಹಾರಲು ಬರಲೊಪ್ಪದಾದಾಗ ಸಿಟ್ಟಿಗೆದ್ದು ಅವಳನ್ನು ಕೊಂದುಹಾಕುತ್ತಾನೆ. ಈಗ ಹೆಂಡತಿಯ ನೆನಪಾಗಿ ಎಲ್ಲ ಮರೆತು ರುಕ್ಮಿಣಿಯತ್ತ ಬರುತ್ತಾನೆ. ಅವಳಲ್ಲಿ ಕ್ಷಮೆಯಾಚಿಸುತ್ತಾನೆ. ರುಕ್ಮಿಣಿ ತಾನೇ ಮುಂದಾಗಿ ಗಂಡನ ಬದಲು ಕಿಚ್ಚಿಗೆ ಬೀಳುತ್ತಾಳೆ. ಮಾವ ನಾರಾಯಣ ಬಂದು ತಮ್ಮನ್ನೆಲ್ಲ ಕೊಂದುಹಾಕುವನೆಂದು ಭಾವಿಸಿ ಇಜಿಯಣ್ಣ ಸ್ವತಃ ತನ್ನ ತಂದೆ–ತಾಯಿ, ಅಣ್ಣ–ತಂಗಿಯರನ್ನು ಕೊಂದು ತಾನೂ ಆತ್ಮಹತ್ಯೆ ಮಾಡಿಕೊಂಡ. ಆಗ ದೇವಕನ್ಯೆಯರು ರುಕ್ಮಿಣಿಯನ್ನು ಭೂಲೋಕಕ್ಕೆ ಕಳಿಸಿದರು. ಅವಳು ಬಂದು ಮುತ್ತಿನಾರತಿಯನ್ನು ಬೆಳಗಿದ ಕೂಡಲೇ ಸತ್ತವರೆಲ್ಲ ಮೇಲೆದ್ದು ರುಕ್ಮಿಣಿಯ ಕಾಲಿಗೆಬಿದ್ದರು. ಎಲ್ಲರೂ ಮನೆಗೆ ಬಂದರು. ಇದು ಇಲ್ಲಿಯ ಸ್ಥೂಲವಾದ ಕತೆ.

**"ಕೋಲಾಟದ ಪದಗಳು"**– ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಸುತ್ತಮುತ್ತಿನ ಹಳ್ಳಿಗಳಲ್ಲಿ, ಸಂಗ್ರಹಿಸಿದ ಕೋಲುಪದಗಳ ಸಂಕಲನವಿದು. ಕೋಲುಪದಗಳು ಎಲ್ಲ ಕಡೆಗೂ ಹೇರಳವಾಗಿ ಸಿಕ್ಕುತ್ತವೆ. ಅವನ್ನು ಎಷ್ಟು ಸಂಗ್ರಹಿಸಿದರೂ ಕಡಿಮೆಯೇ! ಕೋಲಿನ ಬಡಿತದ ನಾದ, ಕೋಲುಪದಗಳ ಪಲ್ಲವಿ, ಅನುಪಲ್ಲವಿ, ಲಯ ಮತ್ತು ಪ್ರಾಸಗಳ ಪುನರಾವರ್ತನೆ ಕಿವಿಗೆ ಇಂಪಾಗಿರುತ್ತವೆ. ಕೇಳುವ ಕಿವಿಗಳಿದ್ದಷ್ಟು ಕೋಲುಕೊಡುವ ಆಟಗಾರರ

ಹುಮ್ಮಸ್ಸೂ ಅಧಿಕಗೊಳ್ಳುತ್ತದೆ. ನೋಡುಗರು ಆಡುಗರೆಲ್ಲ ಆನಂದಪಡುತ್ತಾರೆ. ದೈವ, ಪ್ರಣಯ, ಹಾಸ್ಯ, ವಿಡಂಬನೆಗಳು ಇಲ್ಲಿಯ ಕೋಲುಪದಗಳ ವಸ್ತುವಾಗಿದೆ. ಪ್ರಣಯದ ವೈವಿಧ್ಯತೆಗೆ ಸಂಬಂಧಿಸಿದ ಹಾಡುಗಳೇ ಹೆಚ್ಚಿನ ಸಂಖ್ಯೆಯಲ್ಲಿವೆ.

ಪ್ರಾದೇಶಿಕ ಭಾಷಾವೈಶಿಷ್ಟ್ಯ ಮತ್ತು ಕೋಲುಪದಗಳ ಸಾಹಿತ್ಯದ ಅಂಶಗಳನ್ನು ಕುರಿತು ಅಧ್ಯಯನ ಮಾಡುವವರಿಗೂ ಇದು ಉಪಯುಕ್ತ ಕೃತಿ. ಈ ಭಾಗದ ಗಂಡಸರ ಪ್ರಮುಖ ಮನೋರಂಜನ ಕಲೆ ಕೋಲಾಟವೆಂದು ಲೇಖಕರು ಗುರುತಿಸಿದ್ದಾರೆ. ಈ ಭಾಗದಲ್ಲಿ ಹಂತಿ, ಹೋಳಿ, ಲಾವಣಿ, ಗೀಗೀಪದಗಳು ಇಲ್ಲದಿರುವುದರಿಂದ ಹಳ್ಳಿಯ ಗಂಡಸರು ಸಹಜವಾಗಿ ಕೋಲಾಟದ ಪದಗಳತ್ತ ಆಶ್ರಯಿಸಿದ್ದುದನ್ನು ಕ್ಷೇತ್ರಕಾರ್ಯದ ಅನುಭವದಿಂದ ಲೇಖಕರು ಕಂಡುಕೊಂಡಂತಿದೆ. ಈ ಭಾಗದಲ್ಲಿ 'ಸುತ್ತುಕೋಲು' (ವಿಲಂಬಿತ ಲಯದಲ್ಲಿ ಪದಹಾಡುತ್ತ ಅದರ ಲಯಕ್ಕೆ ತಕ್ಕಂತೆ ಕೋಲು/ಪೆಟ್ಟು ಹಾಕುತ್ತ ತಿರುಗುವುದು) ಮತ್ತು 'ಕೋಪಗೋಲು' (ಪದ ಮುಗಿದ ಮೇಲೆ ದ್ರುತಗತಿಯಲ್ಲಿ ಕುಣಿಯುವ ಕುಣಿತ, ಈ ಸಂದರ್ಭದ ದ್ರುತಲಯಕ್ಕೆ ಹೊಂದುವ ಬೇರೆ ಬೇರೆ ಪದದ ತುಂಡುಗಳಿರುತ್ತವೆ ಇವಕ್ಕೆ 'ಕೋಪ' ಎನ್ನುವರು) ಗಳನ್ನು ಆಡುತ್ತಾರೆ. ಮೇಳದಲ್ಲಿ ಸಾಮಾನ್ಯವಾಗಿ ೧೨ ಜನರಿರುತ್ತಾರೆ. ಈ ಸಂಖ್ಯೆ ಒಮ್ಮೊಮ್ಮೆ ಹದಿನಾರು, ಹದಿನೆಂಟಕ್ಕೆ ಏರುವುದೂ ಉಂಟು. ಬಿಳಿಯ ಕಚ್ಚೆ ಪಂಚೆ, ಬಣ್ಣದ ಬನಿಯನ್, ತಲೆಗೆ ಬಣ್ಣದ ವಸ್ತ್ರ, ಇವಿಷ್ಟು ಯೂನಿಫಾರ್ಮ್ ಕೋಲಾಟಗಾರರು ಧರಿಸುವುದನ್ನು ಸಂಪಾದಕರು ಪೀಠಿಕೆಯಲ್ಲಿ ತಿಳಿಸಿದ್ದಾರೆ. ಜತೆಗೆ ತಮ್ಮ ವಿದ್ಯಾರ್ಥಿಗಳು ಈ ಹಾಡುಗಳನ್ನು ಸಂಗ್ರಹಿಸುವಲ್ಲಿ ನೆರವಾದುದನ್ನು ನೆನೆಯುತ್ತಾರೆ. ಕೊನೆಯಲ್ಲಿ ಶಬ್ದಾರ್ಥ ನೀಡಿದ್ದಾರೆ. ಆದರೆ ವಕ್ತೃಗಳ/ ಹಾಡಿದವರ ಹೆಸರನ್ನು ಸೂಚಿಸಿಲ್ಲ. ಕೋಲಾಟದ ಲಕ್ಷಣ–ಸ್ವರೂಪ, ಪ್ರಕಾರ, ಈ ಕ್ಷೇತ್ರದಲ್ಲಿ ಈವರೆಗೆ ಆದ ಕಾರ್ಯ ಕುರಿತು ಪೀಠಿಕೆಯಲ್ಲಿ ಹೇಳಿದ್ದರೆ ಮುಂದಿನ ಅಧ್ಯಯನಕಾರರಿಗೆ ಅನುಕೂಲವಾಗುತ್ತಿತ್ತು. ಕ್ಷೇತ್ರಕಾರ್ಯದ ಅನುಭವ ಕೂಡ ಹೇಳಿಕೊಂಡಿಲ್ಲ.

ಇಲ್ಲಿ ದೈವ, ಪ್ರಣಯ, ತಮಾಶೆ ಮತ್ತು ಸಂಕೀರ್ಣಗಳೆಂಬ ನಾಲ್ಕು

ಭಾಗಗಳಲ್ಲಿ ಒಟ್ಟು ೧೦೮ ಕೋಲುಪದಗಳನ್ನು ೯೭ ಪುಟಗಳಲ್ಲಿ ಸಂಗ್ರಹಿಸಿಟ್ಟಿದ್ದಾರೆ. ಇಲ್ಲಿಯ ಬಹಳಷ್ಟು ಪ್ರಣಯದ ಹಾಡುಗಳು ಲಾವಣಿ ಗತಿಯಲ್ಲಿವೆ... ['..... ಯಾವ ಈ ಟೀಚಾರಾ ಲಾವಣಿ ಹುಟ್ಟೇತಿ ಬುಧವಾರಾ'–(ಒಳ್ಳವರದ ಹೆಣ್ಣು)] ಇಂಥ ಉಲ್ಲೇಖಗಳೂ ಇವೆ. ಬೇಂದ್ರೆ, ಬೆಟಗೇರಿ ಅವರ ಜಾನಪದಗತ್ತಿನ ಅನೇಕ ಪದ್ಯಗಳು ಇವನ್ನು ಓದುವಾಗ ನೆನಪಾಗುತ್ತವೆ. ಅಚ್ಚ ಜಾನಪದೀಯವಾದ ಹಾಡುಗಳಿವು. ಬೆಂಕಿಗಿಂಕಿ, ಅರವಿಗಿರವಿ, ತಂಬಾಕ್‌ಗಿಂಬಾಕ್, ಚಲಿಮಿಗಿಲಿಮಿ, ಗಾಳಿಗೀಳಿ, ಮಂದಿಗಿಂದಿ, ಚಾಡಿಪಾಡಿ, ಕಳ್ಳಗಿಳ್ಳ, ಮಿದ್ದೋದುಗಿದ್ದೋದು ಇತ್ಯಾದಿ ಮಾರುಲಿಪದಗಳು; ಬಾಳಗೇಡಿ, ಮಾನಗೇಡಿ, ಅಡ್ನಾಡಿ, ಚೌಡಿ, ತತ್ರಿಬಿತ್ರಿಹೆಣ್ಣು, ದೀಬರದಿಂಡಿಹೆಣ್ಣು, ಮುರಕಲಾಡಿಹೆಣ್ಣು, ಮೂಳಾ ಇತ್ಯಾದಿ ಬೈಗುಳ ನುಡಿಗಳು ಸಾಕಷ್ಟು ಕೋಲಾಟ ಪದಗಳಲ್ಲಿ ಅಡಕಗೊಂಡಿವೆ. ಹೆಚ್ಚಿನ ಹಾಡುಗಳಲ್ಲಿ ಅಂತ್ಯಪ್ರಾಸ ಕಂಡುಬರುವುದೂ ಒಂದು ವಿಶೇಷ. ಉದಾ : ಆ ಕಲ್ಲು ಈ ಕಲ್ಲು ಹಾದಿಗಲ್ಲು । ಸೆರಗಲ್ಲು ಪಂಚೇರಗಲ್ಲು । ಮ್ಯಾಕೆ ಒಗೆದರೆ ಕವಣಿಗಲ್ಲು । ಕೆಳಕೆ ಬಿದ್ದರೆ ಪಾಂಡವರ ಕಲ್ಲು । ಎದಿಮೇಲಿರುವುದು ಲಿಂಗದಕಲ್ಲು । ನಾರೇರು ತಿರುವದು ಅತ್ತಿಯಕಲ್ಲು । ಮಿಂಡರು ತಿರುವದು ಗೋದಿಕಲ್ಲು । ಬಾವಿಗ್ಹಾಕೋದು ಬಾಲುಗಲ್ಲು । ಹಗೇವುಕ ಹಾಕೋದು ಹಲ್ಲುಗಲ್ಲು । ಮ್ಯಾರಿಗ್ಹಾಕೋದು ಪಾಮಸಗಲ್ಲು । ಚಾವಡಿಗ್ಹಾಕೋದು ಚದುರಂಗಗಲ್ಲು । ಅಗಸಿಗ್ಹಾಕೋದು ನಮೋಜಿ ಕಲ್ಲು । ಗುಡಿಗುಂಡಾರ ಕಟ್ಟೋದು ಕಲ್ಲು । ಕಲ್ಲಿನೊಳಗ ಕಲ್ ಮೇಲಾದೀತ । ಮಾಲಿಂಗ ಇದ್ದಲ್ಲಿ ॥ ಇಲ್ಲಿಯ ಕಲ್ಲಿನ ನಮೂನೆಗಳನ್ನು ಕೇಳಿ ಅಚ್ಚರಿಯಾಗುವುದಿಲ್ಲವೆ! ಇಲ್ಲಿಯ ಎಲ್ಲ ಹಾಡುಗಳೂ ಕೋಲಾಟದ ಪದಗಳೆಂಬುದು ಸಂಶಯಬರುತ್ತದೆ. ಈ ಪದಗಳನ್ನು ಇನ್ನಷ್ಟು ಸೋಸಿ, ಕೋಲಾಟದ ಪದಗಳೆಂದು ಪ್ರಕಟಿಸಬೇಕಾಗಿತ್ತೇನೋ!

**"ಬಳ್ಳಾರಿ ಜಿಲ್ಲೆಯ ಜನಪದ ಕತೆಗಳು"** – ಸಂಗ್ರಹದಲ್ಲಿಯ ಜನಪದ ಕಥೆಗಳನ್ನು ಲೇಖಕರು ಹೊಸಪೇಟೆ ಕಮಲಾಪುರ, ಅಂಕಸಮುದ್ರ, ಹಂಪಾಪಟ್ಟಣಗಳಲ್ಲಿ ಸಂಗ್ರಹಿಸಿದ್ದಾರೆ. ಇದರಲ್ಲಿ ರಮ್ಯಕತೆಗಳು, ಬುದ್ಧಿವಂತಿಕೆಯ ಕತೆಗಳು, ಅದ್ಭುತ

ಕತೆಗಳು, ಹಾಸ್ಯಕಥೆಗಳು, ಪ್ರಾಣಿಕಥೆಗಳು ಎಂಬ ವಿಭಾಗಗಳಲ್ಲಿ ಒಟ್ಟು ೩೯ ಕಥೆಗಳನ್ನು ಸಂಕಲಿಸಿದ್ದಾರೆ. 'ಪ್ರವೇಶ' ವಿಭಾಗದಲ್ಲಿ ಜನಪದ ಕತೆಗಳ ಹುಟ್ಟು-ವಿದೇಶೀ ವಿದ್ವಾಂಸರ ಜನಪದ ಕತೆಗಳ ಮೂಲ ಕುರಿತು ತತ್ವಸಿದ್ಧಾಂತಗಳ ಸ್ಥೂಲವಿವರಣೆ-ವಿಶ್ಲೇಷಣೆ ಹಾಗೂ ಜನಪದ ಕತೆಗಳ ವೈಶಿಷ್ಟ್ಯ-ವೈಲಕ್ಷಣ್ಯ-ವರ್ಗೀಕರಣ ಕುರಿತೂ ವಿದೇಶೀ ವಿದ್ವಾಂಸರ ಅಭಿಪ್ರಾಯಗಳನ್ನೇ ಮುಂದಿಟ್ಟುಕೊಂಡು ಸಂಕ್ಷಿಪ್ತವಾಗಿ ಚರ್ಚಿಸುತ್ತಾರೆ. ತಾವು ಮಾತ್ರ ಕಥಾವಸ್ತುವಿನ ಹಿನ್ನೆಲೆಯಲ್ಲಿ ತಾವು ಸಂಗ್ರಹಿಸಿದ ಕತೆಗಳನ್ನು ವರ್ಗೀಕರಿಸಿ ಪ್ರಕಟಿಸಿದ್ದಾರೆ. ಇಲ್ಲಿಯೂ ಕ್ಷೇತ್ರಕಾರ್ಯದ ಅನುಭವವನ್ನು ಹೇಳಿಕೊಳ್ಳುವುದಿಲ್ಲ. ಬಹುಶಃ ಅದನ್ನು ಹೇಳಿಕೊಳ್ಳುವ ಭಾವನೆಯೇ ಆ ಕಾಲದ ವಿದ್ವಾಂಸರಲ್ಲಿ ಇರಲಿಲ್ಲವೆಂದು ತೋರುತ್ತದೆ. ಸಂಗ್ರಹಕಾರ್ಯದಲ್ಲಿ ನೆರವಾದ ವಿದ್ಯಾರ್ಥಿಗಳನ್ನು ನೆನೆಯುತ್ತಾರೆ.

**ಕನ್ನಡ ಜನಪದ ಕಾವ್ಯದಲ್ಲಿ ಭಕ್ತಿಯ ನಿರೂಪಣೆ (೧೯೮೨)**- ಇದು ಧಾರವಾಡ ಕ.ವಿ.ವಿ. ಪ್ರಸಾರಾಂಗ ಪ್ರಕಟಿಸಿದ ಉಪನ್ಯಾಸ ಗ್ರಂಥ. ಇವರು ಜನಪದದಲ್ಲಿ ವಿಪುಲವಾಗಿರುವ ಭಕ್ತಿಸಾಹಿತ್ಯವನ್ನು ಓದಿ, ಅನುಭವಿಸಿ ಅರಿತವರು. ಭೂಮಿ, ಎಲ್ಲವ್ವ, ಗಣಪತಿ, ಶಿವ, ಬಸವಣ್ಣ, ವೀರಭದ್ರ, ಹನುಮಂತ, ಜೋಕುಮಾರ, ಮಳೆರಾಯ ಮುಂತಾದ ದೇವ-ದೇವಿಯರ ಬಗೆಗೆ ಆತ್ಮೀಯತೆ, ನಿಷ್ಠೆಯ ಭಕ್ತಿಭಾವದುಂಬಿ ಗ್ರಾಮೀಣರು ಅವನ್ನು/ಅವರನ್ನು ಸ್ತುತಿಸಿದ್ದಾರೆ, ಪ್ರಾರ್ಥಿಸಿದ್ದಾರೆ; ಆ ಮೂಲಕ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಪ್ರಯತ್ನಿಸಿದ್ದಾರೆ; ಆಚರಣೆಗಳ ಮೂಲಕವೂ ಅವರನ್ನು ಒಲಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಅವರ ಸಹಜಭಕ್ತಿ ಹಾಡಿನ ಹೊನಲಾಗಿ ಹರಿದಿದೆ. ಆ ಹೊನಲಿನಲ್ಲಿ ನಿರೂಪಿತವಾದ ಭಕ್ತಿಯ ಸ್ವರೂಪ ವಿವರಣೆಯೇ ಪ್ರಸ್ತುತ ಪುಸ್ತಿಕೆ.

ಜನಪದರ ಭಕ್ತಿಯ ಹುಟ್ಟು ಅದರ ಸ್ವರೂಪ, ಜನಪದ-ಶಿಷ್ಟರಲ್ಲಿಯ ಭಕ್ತಿಯ ವ್ಯತ್ಯಾಸ ಇತ್ಯಾದಿ ಕುರಿತು ಈ ಕಿರುಕೃತಿಯಲ್ಲಿ ಲೇಖಕರು ವಿಶೇಷಿಸಲೆತ್ನಿಸಿದ್ದಾರೆ. ಪ್ರವೇಶ, ಸ್ತುತಿ, ಪ್ರಾರ್ಥನೆ, ದೇವತಾವರ್ಣನೆ,

ಮಳೆರಾಯ, ಬೇಡಿಕೆ, ನಿರೀಕ್ಷೆ, ಆತ್ಮೀಯ ಸಲಿಗೆ, ನಿಷ್ಠೆ, ಅನುಭಾವ, ಸಮಾರೋಪ ಇತ್ಯಾದಿ ಚಿಕ್ಕ ಚಿಕ್ಕ ಅಧ್ಯಾಯಗಳಲ್ಲಿ ಜನಪದರ ಭಕ್ತಿಭಾವವನ್ನು ನಿರೂಪಿಸಿದ್ದಾರೆ. ಕೊನೆಯಲ್ಲಿ ಗ್ರಂಥಋಣವನ್ನು ನೀಡಿದ್ದಾರೆ.

ಜಾನಪದರ ಭಕ್ತಿಯ ವೈವಿಧ್ಯದ ಅರಿವನ್ನು ಉಂಟುಮಾಡಿಕೊಡುವ ಅಂಗೈಯಗಲದ ಕಿರುಕೃತಿಯಿದು. ಜನಪದರ ಭಾವತೀವ್ರತೆ ಅವರ ಭಕ್ತಿಪೂರ್ಣಹಾಡುಗಳ ಸೃಷ್ಟಿಗೆ ಕಾರಣವಾಗಿದೆ. ಭಾವಜೀವಿಗಳಾದ ಹಳ್ಳಿಗರು ತಕ್ಷಣವೇ ಭಾವೋದ್ವೇಗಕ್ಕೆ ಒಳಗಾಗುವಂಥವರು. ಅದರಲ್ಲಿಯೂ ದೇವಸಂಬಂಧಿ ಮಾತು, ಸನ್ನಿವೇಶ ಅವರ ಭಾವವನ್ನು ಉದ್ದೀಪನಗೊಳಿಸುತ್ತದೆ. ಇಂಥ ಸಂದರ್ಭಗಳಲ್ಲಿ ಹುಟ್ಟಿದ ಹಾಡುಗಳು ಸತ್ವಪೂರ್ಣವಾಗಿರುತ್ತವೆ. ಇಲ್ಲಿಯ ಜನಪದರ ಭಕ್ತಿ ಮತ್ತು ಭಕ್ತಿಗೀತೆಗಳು ರಸಪೂರ್ಣವಾಗಿರಲು ಹಳ್ಳಿಗರ ನೇರವಾದ ಅನುಭವದ ಅಭಿವ್ಯಕ್ತಿಯೇ ಕಾರಣ. ಸ್ತ್ರೀಪುರುಷರಿಬ್ಬರೂ ಭಾವುಕರು. ಅದರಲ್ಲಿಯೂ ಸ್ತ್ರೀಯರು ಇನ್ನೂ ಭಾವುಕರು. ಹಾಗಾಗಿ ಅವರ ರಚನೆಗಳು ಇನ್ನೂ ಭಾವದೀಪ್ತಿಯಿಂದ ಕೂಡಿರಲು ಸಾಧ್ಯವೆಂದು ಲೇಖಕರು ಅಭಿಪ್ರಾಯಿಸಿದ್ದು, ಜನಪದರ ಭಕ್ತಿಭಾವವನ್ನು ಸರಿಯಾಗಿ ಅರ್ಥೈಸಿದ್ದರ ಪ್ರತೀಕ.

**'ಮರಿಕಲ್ಲ ಕವಿಯ ಗೀಗೀಪದಗಳು'** (೨೦೦೧)– ಇದು ಬಸವರಾಜ ಮಲಶೆಟ್ಟರು ತಮ್ಮ ತಂದೆ ಮರಿಕಲ್ಲಪ್ಪ ರುದ್ರಪ್ಪ ಮಲಶೆಟ್ಟಿ ಅವರಿಂದ ಸುಮಾರು ೩೦ಕ್ಕೂ ಮಿಕ್ಕಿ ಸಂಪಾದಿಸಿದ ಗೀಗೀಪದಗಳ ಕೃತಿ. ಇಲ್ಲಿಯ ಗೀಗೀ ಹಾಡುಗಳು ವಸ್ತು ವೈವಿಧ್ಯಮಯವಾಗಿವೆ; ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ಧಾರ್ಮಿಕ, ಆಧ್ಯಾತ್ಮಿಕ ವಸ್ತುಗಳನ್ನು ಬಳಸಿಕೊಂಡ ಗೀಗೀಗಳಿಲ್ಲಿವೆ. ಮರಿಕಲ್ಲಪ್ಪ ಹರೆಯದಲ್ಲಿ ಒಳ್ಳೆಯ ಕುಸ್ತಿಪಟುಗಳಾಗಿದ್ದರಿಂದ, ತನ್ನ ಸಮಕಾಲೀನ ಕುಸ್ತಿ (ಶಕ್ತಿ ಪ್ರದರ್ಶನ ಕಲೆ) ಕಲೆಯನ್ನು ಗೀಗೀಯಲ್ಲಿ ಪರಚಯಿಸಿದ್ದಾರೆ. ಚಾರಿತ್ರಿಕ ಮಹತ್ವವಿರುವ 'ಚಳವಳಿಯ ಪದ'ವನ್ನು ಬರೆದಿದ್ದಾರೆ. ಆಧ್ಯಾತ್ಮದ ಗೀತೆಗಳನ್ನು ಬರೆದಿದ್ದಾರೆ. ಕೆಲವನ್ನು ಇತಿಹಾಸ, ಪುರಾಣಗಳಿಂದ ಓದಿ, ಕೇಳಿ ತಿಳಿದು ಗೀಗೀ ಹಾಡುಗಳನ್ನು ರಚಿಸಿದ್ದಾರೆ. ಅದಕ್ಕಾಗಿ ಬ.ಮ. ಅವರು ಈ ಕವಿಯನ್ನು ಪರಿಚಯಿಸುವಾಗ

ಒಬ್ಬ 'ಅಭಿಜಾತ ಗೀಗೀಕವಿ' ಯೆಂದುದು ಸೂಕ್ತವಾದುದು. ಮರಿಕಲ್ಲ ಕವಿಗಳು ಆಕಾಶವಾಣಿಯಲ್ಲಿ ಪ್ರಸಾರಕ್ಕಾಗಿ ಬರೆದ ಗೀಗೀಪದಗಳನ್ನು ಇಲ್ಲಿ ಸಂಕಲಿಸಲಾಗಿದೆ. ರೇಡಿಯೋದಲ್ಲಿ ಪ್ರಸಾರಕ್ಕೆ ಅನುಕೂಲವಾಗುವಂತೆ ಸಣ್ಣ–ದೊಡ್ಡ ಗೀಗೀಪದ ಬರೆದು ಹಾಡಿದ್ದಾರೆ. ತನ್ನ ಸಮಕಾಲೀನ ವಸ್ತುವನ್ನು ಆಯ್ಕೆಮಾಡಿಕೊಂಡು ಅತ್ಯಂತ ಖುಷಿಯಿಂದ ಗೀಗೀಪದ ಕಟ್ಟಿದ್ದಾರೆ. ಕುಟುಂಬಯೋಜನೆಯಂಥ ಗೀಗೀಗಳನ್ನು ಬರೆದಿದ್ದಾರೆ. ಇಲ್ಲಿಯ ಎಲ್ಲ ಗೀಗೀಪದಗಳಲ್ಲಿ ಗೀಗೀ ಗತ್ತು, ಲಯ, ಪ್ರಾಸಗಳು ಹಾಸುಹೊಕ್ಕಾಗಿವೆ. ಗೀಗೀಯನ್ನು ಮೂಲಧಾಟಿಯಲ್ಲಿ ಉಳಿಸುವ ಪ್ರಯತ್ನಮಾಡಿದವರು. ಆಡುಮಾತಿನ ಲಯ, ನುಡಿಗಟ್ಟು, ಪ್ರಾಸ, ಅವರ ಗೀಗೀ ರಚನೆಯಲ್ಲಿ ಸಹಜವಾಗಿ ಮೈವೆತ್ತಿವೆ. ತಮ್ಮ ಹಾಡುಗಳ ಕೊನೆಯಲ್ಲಿ ತನ್ನ ಆರಾಧ್ಯದೈವ, ತನ್ನೂರಿನ ಮಾರುತಿ–ಬಲಭೀಮನನ್ನು ಅಂಕಿತಮಾಡಿಕೊಂಡಿದ್ದಾರೆ. ಈ ಕವಿಯ ಕಾವ್ಯರಚನೆಗೆ ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ ಮೊದಲಾದವರು ಸ್ಫೂರ್ತಿನೀಡಿದಂತೆ, ಬಸವೇಶ್ವರ, ಮಹಾತ್ಮಗಾಂಧಿ, ಅನಸೂಯ, ಭಕ್ತಸಿರಿಯಾಳ ಅಂಥವರೂ ಇವರ ಗೀಗೀರಚನೆಗೆ ಪ್ರೇರಕರಾಗಿದ್ದಾರೆ. ಗಣಪತಿ, ಹನುಮಂತ, ಸಾಂಬಶಿವ, ಜಿನೇಶ್ವರ ಮೊದಲಾದವರೂ ಸ್ಫೂರ್ತಿಯನ್ನಿತ್ತಿದ್ದಾರೆ.

ಈ ಕವಿಯನ್ನು ಗ್ರಂಥದ ಆರಂಭದಲ್ಲಿ ಲೇಖಕರು ಸ್ಫುಟವಾಗಿ ಪರಿಚಯಿಸಿದ್ದಾರೆ. ಕಡ್ಲಿಮಟ್ಟಿ ಕಾಶೀಬಾಯಿ, ಕುಸ್ತಿಪೈಲ್ವಾನರು, ೪೨ರ ಚಳವಳಿ ಇತ್ಯಾದಿ ಈ ಸಂಕಲನದ ಒಳ್ಳೇ ಗೀಗೀಗಳು. ಕೆಲವು ಸಂದೇಶಕ್ಕೆಡೆಮಾಡಿಕೊಡುವ ಸಾಲುಗಳೂ ಇಲ್ಲಿವೆ. ಉದಾ : 'ಮೋಸ ಮಾಡಿದ ಮಲ್ಲಪ್ಪನ್ನ ಗಾಸಮಾಡಿ ಬ್ರಿಟಿಷರು ಆನಿಕಾಲಿಗಿ ಕಟ್ಟಿ ಎಳಸಿದರಾ' ಎಂಬುದು ಗೀಗೀಸಾಲು. ಆದರೆ ಕಿತ್ತೂರಿಗೆ ದ್ರೋಹಬಗೆದ ಮಲ್ಲಪ್ಪಶೆಟ್ಟಿಯನ್ನು ಕಿತ್ತೂರಿನ ಪ್ರಜೆಗಳೇ ಆನಿಕಾಲಿನಿಂದ ತುಳಿಸಿಹಾಕಿದರೆಂಬುದೇ ಸೂಕ್ತವಿಚಾರ. ಅಂತೆಯೇ 'ಶರಣರು ಆದಾರ ಬಲುಬೆಂಕಿ ಉಳಿಯಾಲಿಲ್ಲ ಶಾಂತಿ ಬಿಜ್ಜಳನ ಎಳದ ಕೊಂದಾರು' ಎಂಬುದೂ ಸರಿಯಾದ ವಿಚಾರವಲ್ಲ. ಇಲ್ಲಿ ಬಿಜ್ಜಳನನ್ನು ಕೊಂದವರು ಕೊಂಡೆಮಂಚಣ್ಣ ಮುಂತಾದ ಪುರೋಹಿತರೇ ವಿನಾ ಶರಣರಲ್ಲ! ಇಂಥ

ಸಾಲುಗಳನ್ನು ಸಂಪಾದಕರು ಆಲೋಚಿಸಿ ಬರೆಯಬೇಕಾಗಿತ್ತು. ಕೊನೆಯಲ್ಲಿ ಶಬ್ದಕೋಶ ಕೊಟ್ಟಿದ್ದಾರೆ. ಇಲ್ಲಿ ಈ ಕವಿ ಗೀಗೀಗೆ ಬಳಸಿಕೊಂಡ ವಸ್ತುವನ್ನು ಆತನ ಕಾಲದ 'ಭೀಮಕವಿ' ಮೊದಲಾದವರು ವೆಗ್ಗಳವಾಗಿ ಬಳಸಿಕೊಂಡಿದ್ದಾರೆ. ಆದರೆ, ಈ ಕವಿಯ ಅಭಿವ್ಯಕ್ತಿ ನೂತನತೆ ಮತ್ತು ಸ್ವಂತಿಕೆಯಿಂದ ಕೂಡಿದ್ದುದರಿಂದ ಓದುವುದೇ ಒಂದು ಖುಷಿ. ಕವಿ ಕುಸ್ತಿಪಟು, ಆಧ್ಯಾತ್ಮಿಕ ಜನಪದ ಹಾಡುಗಾರ ಮತ್ತು ಜನಪದ ಕವಿಯಾದುದರಿಂದ ತನ್ನ ಜೀವನಾನುಭವ, ಪ್ರತಿಭೆಗಳಿಂದ ಗೀಗೀಪರಂಪರೆಗೆ ತನ್ನದೇ ಅನುಪಮ ಸೇವೆ ಸಲ್ಲಿಸಿದ್ದಾರೆ. ಚಿಕ್ಕಚಿಕ್ಕ ಪದಗಳ, ಸಂಕೀರ್ಣವೂ ಸರಳವೂ ಆದ ಪ್ರತಿ ವಾಕ್ಯರಚನೆಯಲ್ಲಿ ಜಾನಪದ ಸೊಗಡು, ಲಯ, ಧಾಟಿಗಳು, ವಿಜೃಂಭಿಸಿವೆ. ಜಾನಪದ ವಿದ್ವಾಂಸರಾದ ಮಗ ಬಸವರಾಜ ತಮ್ಮ ತಂದೆಯ ಈ ಕೃತಿಯನ್ನು ಬಹಳ ತಡವಾಗಿ ಪ್ರಕಟಿಸಿದುದು ಬೇಸರದ ವಿಷಯ. ತನ್ನೂರು ತಿಗಡೊಳ್ಳಿಯ ಬಸವೇಶ್ವರ ಪ್ರಕಾಶನದಿಂದ ಪ್ರಕಟಿಸಿದುದು ಮಾತ್ರ ಸಂತಸತಂದಿದೆ. ಇಲ್ಲಿಯ ಎಲ್ಲ ಗೀಗೀಪದಗಳಲ್ಲಿ 'ಚಾಲ–ಏರು' ಗಳನ್ನು ಮರಿಕಲ್ಲಕವಿಗಳು ಮರೆಯದೇ ಗುರುತಿಸಿದ್ದು ಗಮನೀಯ. ಅದು ಅವರ ಗೀಗೀ ರಚನೆಯ ನಿಷ್ಠೆಯನ್ನು ಅರುಹುತ್ತದೆ. ಇತ್ತೀಚಿನ ವಿರಳ ಗೀಗೀ ಸಂಗ್ರಹಗಳಲ್ಲಿ ಅದು ಅಪೂರ್ವವಾದುದು.

**'ಕರ್ನಾಟಕ ಜನಪದ ರಂಗಭೂಮಿ' (೨೦೦೮)**– ಇದು ಬ.ಮ. ಅವರ ಜನಪದ ರಂಗಭೂಮಿಯ ತಿಳಿವಳಿಕೆ ಮತ್ತು ಕಾಳಜಿಯನ್ನು ವ್ಯಕ್ತಪಡಿಸುವ ಕೃತಿ. ಇವರು ಮೂರು ದಶಕಗಳಿಂದಲೂ ಕನ್ನಡ ಜನಪದ ರಂಗಭೂಮಿಗೆ ಸೇವೆಸಲ್ಲಿಸುತ್ತಾ ಬಂದಿದ್ದಾರೆ. ರಂಗಭೂಮಿಯ ಬಗೆಗೆ ಗಾಢವಾದ ಪ್ರೀತಿ; ಆಳವಾದ ಜ್ಞಾನಹೊಂದಿದ ಬ.ಮ. ರಂಗಭೂಮಿಯ ಎಲ್ಲ ಪರಿಕರಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಲು ಪ್ರಯತ್ನಿಸಿದ್ದಾರೆ. ಜನಪದ ರಂಗಭೂಮಿಯ ಆಯಾಮಗಳನ್ನು ಕ್ಷೇತ್ರಕಾರ್ಯದ ಮೂಲಕ ತಿಳಿದವರಾದುದರಿಂದ, ಸ್ವಂತ ಅಭಿಪ್ರಾಯಗಳನ್ನು ಕೊಡಲು ಸಮರ್ಥರಾಗಿದ್ದಾರೆ. ಬಯಲಾಟ ಕಲಾವಿದರಾದ ಬ.ಮ. ಬಯಲಾಟಗಳನ್ನು ರಂಗಪ್ರಯೋಗಕ್ಕೆಳಿಸಿ ಪರಿಷ್ಕರಿಸಿದ ಪ್ರಾಯೋಗಿಕ

ಜಾನಪದ ಚಿಂತಕರು. ಈ ರಂಗಪ್ರಯೋಗದಲ್ಲಿ ನಟರಾಗಿ ಅಭಿನಯಿಸುತ್ತ ಬಂದವರಾದ್ದರಿಂದ ರಂಗಭೂಮಿಗೆ ತೀರ ಹತ್ತಿರದವರಾಗಿದ್ದಾರೆ. ಜನಪದ ವಿದ್ವತ್ತು, ಜನಪದ ಕಲಾಪ್ರತಿಭೆಗಳನ್ನು ಹೊಂದಿದ ಬ.ಮ. ಬರೆದ ಈ ಪುಸ್ತಕ ಜನಪದ ಲೋಕದಲ್ಲಿ ಅಧಿಕೃತ ದಾಖಲೆಯಾಗಿದೆ. ಜನಪದ ರಂಗಭೂಮಿಯ ಆಸಕ್ತರಿಗೆ, ವಿದ್ವಾಂಸರಿಗೆ, ವಿದ್ಯಾರ್ಥಿಗಳಿಗೆ ಉಪಯುಕ್ತ ಕೈಪಿಡಿ ಪ್ರಸ್ತುತ ಪುಸ್ತಕ. ಕನ್ನಡ ಜನಪದ ರಂಗಭೂಮಿಯ ಪರಂಪರೆಯನ್ನು ಪರಿಚಯಿಸುವ ಉದ್ದೇಶದಿಂದ ಸಿದ್ಧವಾದ ಈ ಪುಸ್ತಕ ಅಪರೂಪವಾದುದು. "ನಾನು ಹತ್ತು ವರ್ಷ ಹುಡುಗನಾಗಿದ್ದಾಗ ನನ್ನನ್ನು ಸಣ್ಣಾಟದ ಸ್ಟೇಜಿಗೆ ಎಳೆದುಕೊಂಡು ನನ್ನಲ್ಲಿ ರಂಗಪ್ರೀತಿಯ ಬೀಜಬಿತ್ತಿ ನನ್ನೆಲ್ಲ ಸಾಧನೆಗಳಿಗೆ ಸ್ಫೂರ್ತಿಯ ಸೆಲೆಯಾಗಿದ್ದ ಅಪ್ಪ ಮರಿಕಲ್ಲಪ್ಪನಿಗೆ"-ಎಂದು ಪ್ರಸ್ತುತ ಕೃತಿ ಅರ್ಪಿಸಿ, ಲೇಖಕ ಧನ್ಯರಾಗಿದ್ದಾರೆ. ಈ ಕೃತಿ-ಪ್ರವೇಶ, ಪಗರಣ, ದಾಸರಾಟ, ಸಣ್ಣಾಟ, ಪಾರಿಜಾತ, ಮೂಡಲಪಾಯ ಯಕ್ಷಗಾನ, ತೊಗಲುಗೊಂಬೆಯಾಟ, ಸೂತ್ರದ ಗೊಂಬೆಯಾಟ, ಹಗಲುವೇಷಗಾರರು ಇತ್ಯಾದಿ ಹತ್ತು ಅಧ್ಯಾಯಗಳಲ್ಲಿ ತೆರೆದುಕೊಂಡಿದೆ. "ಪಗರಣವೇ ಜಾನಪದದ ಮೂಲ ದೇಸೀ ರಂಗಭೂಮಿ..... ಪಗರಣ, ಬಹುರೂಪ, (ಹಗಲುವೇಷ) ದಾಸರಾಟ, ಸೂತ್ರದ ಗೊಂಬೆ, ತೊಗಲುಗೊಂಬೆ ಆಟಗಳು ನೂರಾರು ವರುಷಗಳ ಹಿಂದೆ ಜನಪದ ರಂಗಭೂಮಿಯ ಶ್ರೀಮಂತಿಕೆಗೆ ಕಾರಣವಾದುವು..... ಈ ಕರ್ನಾಟಕ ಜನಪದ ರಂಗಪರಂಪರೆಗೆ ಯಕ್ಷಗಾನ ಮೂಡಲಪಾಯ. ಶ್ರೀಕೃಷ್ಣ ಪಾರಿಜಾತ, ಸಣ್ಣಾಟ ಇವು ನಂತರ ಸೇರಿಕೊಂಡವು.... ಎಂದು "ಕರ್ನಾಟಕ ಜನಪದ ರಂಗಭೂಮಿ'ಯನ್ನು ಕುರಿತು ತರ್ಕಬದ್ಧವಾದ ಗಟ್ಟಿವಿಚಾರಗಳನ್ನು ಮುಂದಿಟ್ಟಿದ್ದಾರೆ. ೧೯೫೦ರವರೆಗೆ ವೈಭವದಿಂದ ಮೆರೆದ ಈ ರಂಗಭೂಮಿ ಆಧುನಿಕತೆಗೆ ಒಳಗಾಗಿ ಕಂಪನಿ ನಾಟಕ ಮತ್ತು ಸಿನಿಮಾಗಳ ಪ್ರಖರ ಬೆಳಕಿನ ಮುಂದೆ ಮಂಕಾಗಿಹೋದುದರ ಬಗೆಗೆ ಲೇಖಕ ಕಳವಳಪಡುತ್ತಾರೆ. ಯಕ್ಷಗಾನ, ಶ್ರೀಕೃಷ್ಣಪಾರಿಜಾತ ಮೇಳಗಳು ಜೀವಂತವಾಗಿವೆಯಾದರೂ ಅವುಗಳ ಪ್ರದರ್ಶನ ಗುಣಪಟ್ಟದ ಬಗೆಗೆ ಲೇಖಕರು ಅಸಮಾಧಾನ ತಾಳಿದ್ದಾರೆ. ಮೂಲಾಂಶಗಳೊಂದಿಗೆ ಆಧುನಿಕ ಅಭಿರುಚಿಗನುಗುಣವಾಗಿ ಜನಪದ

ರಂಗಪ್ರಕಾರಗಳ ಪರಿಷ್ಕರಣೆ ಒಂದು ಚಳವಳಿಯ ರೂಪದಲ್ಲಿ ತುರ್ತಾಗಿ ನಡೆಯಬೇಕೆಂಬುದನ್ನು ಸೂಚಿಸುತ್ತಾರೆ. ತಮ್ಮ 'ಥೀಸಿಸ್' ಉತ್ತರ ಕರ್ನಾಟಕದ ಬಯಲಾಟಗಳು' ಬೃಹತ್ ಕೃತಿಯನ್ನು ಸುಮಾರು ೧೦೦ ಪುಟಗಳ 'ಕರ್ನಾಟಕ ಜನಪದ ರಂಗಭೂಮಿ' ಹೆಸರಿನಲ್ಲಿ ಸಂಗ್ರಹಿಸಿದಂತಿದೆ.

**'ಶ್ರೀಕೃಷ್ಣ ಪಾರಿಜಾತ' (೧೯೯೯)**–ಬ.ಮ. ಅವರು ಪಾರಿಜಾತದ ಮೂಲಸ್ವರೂಪವನ್ನು ಹಿಡಿದಿಡುವ ಉದ್ದೇಶದಿಂದ ಪ್ರಸ್ತುತ 'ಶ್ರೀ ಕೃಷ್ಣ ಪಾರಿಜಾತ' ಕೃತಿಯನ್ನು ಸಂಪಾದಿಸಿದಂತಿದೆ. ಹಾಗೆ ನೋಡಿದರೆ ಪಾರಿಜಾತ ಮೂಲದಲ್ಲಿ ಹೇಗಿತ್ತು? ಯಾರು ಬಲ್ಲರು? ಅದರ ರಂಗಪ್ರಯೋಗ ಬದಲಾಗುತ್ತಲೇ ಬಂದಿರುವುದರಿಂದ ಅದರ ಸ್ವರೂಪವೂ ಕಾಲದಿಂದ ಕಾಲಕ್ಕೆ ಬದಲಾಗುತ್ತಲೇ ಬಂದಿರುತ್ತದೆ. ಪರಂಪರೆಯನ್ನು ಉಳಿಸಿಕೊಂಡು ಬಂದ ಸಧ್ಯದ ಪ್ರಯೋಗ/ ಪ್ರದರ್ಶನಗಳನ್ನು ಅನುಲಕ್ಷಿಸಿ, ಸಧ್ಯದ ಮಟ್ಟಿಗೆ ಅದರ ಮೂಲಸ್ವರೂಪವನ್ನು ಹಿಡಿದಿಡುವ ಪ್ರಯತ್ನ ಬ.ಮ. ಇಲ್ಲಿ ಮಾಡಿದ್ದಾರೆ. ಬೆಳ್ಳಿಬೆಳತನಕ ನಡೆಯುವ ಪಾರಿಜಾತ ಪ್ರದರ್ಶನದಲ್ಲಿ ಹಲವಾರು ಉಪಕತೆಗಳು, ದೃಷ್ಟಾಂತಗಳು, ವಿಷಯಾಂತರ, ವ್ಯಾಖ್ಯಾನ ಮುಂತಾದವು ಸೇರಿಕೊಂಡಿರುತ್ತವೆ. ಅವುಗಳಲ್ಲಿ ಪ್ರಸ್ತುತವಾದ ಮತ್ತು ಆವಶ್ಯಕವಾದವುಗಳನ್ನು ಉಳಿಸಿಕೊಂಡು ಮಿಕ್ಕುವನ್ನು ಕೈಬಿಟ್ಟು ಪಾರಿಜಾತವನ್ನು ಅಚ್ಚುಕಟ್ಟಾಗಿ ಸಂಪಾದಿಸಿಕೊಟ್ಟಿದ್ದಾರೆ. ಇದು ರಂಗಪ್ರತಿಯೇ! ಪ್ರದರ್ಶನ ಅವಲಂಬಿಸಿ ಸಿದ್ಧಪಡಿಸಿದಂಥದು. ಸಂಸ್ಕೃತ ಶ್ಲೋಕಗಳನ್ನು ಕೈಬಿಟ್ಟು ಸಾಧ್ಯವಾದಷ್ಟು ದೇಸೀ ಹಾಡುಗಳನ್ನು, ದೇಸೀ ಮಾತುಗಳನ್ನು ದಾಖಲಿಸಲು ಪ್ರಯತ್ನಿಸಿದ್ದಾರೆ. 'ಹಾಡುಗಬ್ಬದಿಂದ ರಂಗಭೂಮಿಗೆ' ಎನ್ನುವ ಪ್ರಸ್ತಾವನೆಯಲ್ಲಿ, 'ಪಾರಿಜಾತ ಸಾಹಿತ್ಯ ಕೃತಿಯಾಗಿ ಹಾಗೂ ರಂಗಕೃತಿಯಾಗಿ ಬೆಳೆದುಬಂದುದನ್ನು ಅದರ ಕಥಾಸಾರಸಹಿತ' ವಿವರಿಸುತ್ತಾರಾದರೂ ತಮ್ಮ ಈ ಸಂಪಾದನೆಯ ಕುರಿತು ಯಾವ ಮಾತನ್ನೂ ಆಡದಿರುವುದು ಆಶ್ಚರ್ಯದ ಸಂಗತಿಯೇ ಸರಿ.

**ಉತ್ತರ ಕರ್ನಾಟಕದ ಬಯಲಾಟಗಳು (೧೯೮೩ ಪ್ರಮು : ೨೦೦೮ ದ್ವಿಮು)**– ಇದು ಬ.ಮ. ಅವರಿಗೆ ಪಿಎಚ್.ಡಿ. ದೊರಕಿಸಿಕೊಟ್ಟ ಸಂಶೋಧನ ಕೃತಿ.

ತಂದೆ ಹಾಡುವ ಗೀಗೀ, ತಾಯಿ ಹಾಡುವ ಸೋಬಾನೆ, ಊರಲ್ಲಿ ನಿತ್ಯ ನಡೆಯುವ ಭಜನೆ, ಆಗಾಗ್ಗೆ ಜರುಗುವ ಬಯಲಾಟ ಪ್ರಯೋಗಗಳು, ಸೋಗುಗಳು, ಹೋಳಿಹಾಡು, ಕರ್ಬಲ್‌ಪದಗಳನ್ನು ಕೇಳುತ್ತ, ಗುನುಗುನಿಸುತ್ತ, ನೋಡುತ್ತಲೇ ಬೆಳೆದುಬಂದವರು ಮಲಶೆಟ್ಟಿ. ತಮ್ಮ ೧೦–೧೧ನೇ ವಯಸ್ಸಿನಲ್ಲಿಯೇ ತಂದೆಯೊಂದಿಗೆ 'ನಿಜಗುಣಿ' ಆಟ (ಸಣ್ಣಾಟ)ದಲ್ಲಿ ಕಾಲುಗಳು ಸರಿಯಾಗಿ ನಿಲುಕದಿದ್ದರೂ ಪ್ರಯತ್ನಪಟ್ಟು 'ಕಾಲುಪೇಟಿ' (ಹಾರ್ಮೋನಿಯಂ) ಯನ್ನು ಬೆಳತನಕ ಬಾರಿಸಿ, ಸೈ ಎನಿಸಿಕೊಂಡವರು. ತಂದೆಯಿಂದ ಹಾರ್ಮೋನಿಯಂ ವಾದನ ಕಲಿತು ಸಿಗ್ಗಾಂವಿ ಪ್ರಾಥಮಿಕ ಶಾಲಾಶಿಕ್ಷಕರಿಂದ ಶಾಸ್ತ್ರೀಯ ಸಂಗೀತದ ದೀಕ್ಷೆ ಪಡೆದ ಬ.ಮ. ಸಣ್ಣವರಿದ್ದಾಗಲೇ ಸಂಗೀತವನ್ನು ಬೆಳೆಸಿಕೊಂಡರು, ಪರಿಣತಿ ಸಾಧಿಸಿದರು. ಮುಂದೆ ವಿದ್ಯಾಭ್ಯಾಸಕ್ಕೆ ಧಾರವಾಡದಲ್ಲಿದ್ದುದರಿಂದ ಶಾಸ್ತ್ರೀಯ ಸಂಗೀತವನ್ನು ಇಲ್ಲಿಯ ವಾತಾವರಣದಿಂದ ಬೆಳೆಸಿಕೊಂಡರು. ಜಾನಪದ ಇವರನ್ನು ಸೆಳೆದುಕೊಂಡಿತು. ಈ ಸೆಳವಿನಲ್ಲಿ ಅರಿವಿಲ್ಲದೆಯೇ ತೇಲಿದರು. ಜಾನಪದ ಹಂಬಲ, ಆಸಕ್ತಿ, ಉತ್ಸಾಹಗಳು ಇವರನ್ನು ಜಾನಪದದ ಗಂಭೀರ ಅಧ್ಯಯನಕ್ಕೆ ತೊಡಗಿಸಿಬಿಟ್ಟುವು ಎಂಬುದನ್ನು ಮತ್ತೆ ಹೇಳಬೇಕಾಗಿಲ್ಲ. ಕಾಲೇಜಿನಲ್ಲಿ ಜನಪದವನ್ನು ಹಾಡತೊಡಗಿದರು. ಬಯಲಾಟದಲ್ಲಿಯ ಏಕಪಾತ್ರವನ್ನು ಅಭಿನಯಿಸತೊಡಗಿದರು. ಎಂ.ಎ. ಓದುವಾಗ ಜಾನಪದವನ್ನು ಐಚ್ಛಿಕವಾಗಿ ತೆಗೆದುಕೊಂಡರು. ಜಾನಪದದ ಈ ಗೀಳು ಅಧ್ಯಯನಕ್ಕೆ ಒಳಪಟ್ಟು ಗಂಭೀರವಾಯಿತು. ಈ ಕಾರಣದಿಂದಲೇ 'ಉತ್ತರ ಕರ್ನಾಟಕದ ಬಯಲಾಟ' ಗಳು ವಿಷಯವನ್ನು ಪಿಎಚ್.ಡಿಗೆ ಆರಿಸಿಕೊಂಡರು. ಆಗಲೇ ರೇಡಿಯೋ ನಾಟಕ, ಸ್ಟೇಜ್ ನಾಟಕಗಳಲ್ಲಿ ಅಭಿನಯಿಸಿದ ಅನುಭವ ಮತ್ತು ಸಂಗೀತ ಚೆನ್ನಾಗಿ ತಿಳಿದಿರುವುದರಿಂದ ಹಾಗು ವಿಪುಲವಾದ ಕ್ಷೇತ್ರಕಾರ್ಯ ಕೈಗೊಂಡಿದ್ದುದರಿಂದ ಪ್ರಸ್ತುತ 'ಥೀಸಿಸ್'ಅನ್ನು ಇತರ ಜನಪದ ವಿದ್ವಾಂಸರಿಗಿಂತ ಭಿನ್ನವಾಗಿ ಬರೆಯಲು ಅವರಿಗೆ ಸಾಧ್ಯವಾಯಿತು. ಅಷ್ಟೇ ಅಲ್ಲ, ಅವರ ಓದು ವೈವಿಧ್ಯಮಯವಾದುದು. ಸಂಗೀತ–ರಂಗಭೂಮಿ–ವಿಮರ್ಶೆ–

ಸಂಶೋಧನೆ-ತತ್ವಶಾಸ್ತ್ರ-ಸಮಾಜಶಾಸ್ತ್ರ-ಶಾಸನ-ಇತಿಹಾಸ-ಸಂಸ್ಕೃತಿ..... ಇದೆಲ್ಲದರ ಓದಿನಿಂದ ಅವರ ಬಯಲಾಟಗಳ ಜಾನಪದ ಸಮಗ್ರ ಅಧ್ಯಯನಕ್ಕೆ ಶಕ್ತಿ ಬಂದಿತು. ಉತ್ತರ ಕರ್ನಾಟಕದ 'ಕರಡಿಮಜಲು' ಮೊದಲಾದ ಜನಪದ ವಾದ್ಯಗಳಲ್ಲಿ ಶಾಸ್ತ್ರೀಯತೆ ಹೇಗೆ ಅಡಕಗೊಂಡಿರುತ್ತದೆಂಬುದನ್ನು ತಿಳಿಸಿದರು. ಈ ವಾದ್ಯಗಳಿಗೆ ಒಂದು ವ್ಯಾಕರಣ ಇದೆ ಎನ್ನುವುದನ್ನೂ ಸಿದ್ಧಮಾಡಿ ತೋರಿದರು. ಶಾಸ್ತ್ರೀಯತೆಯನ್ನು ಅಂತರ್ಗತಗೊಳಿಸಿಕೊಂಡ ಈ ವಾದ್ಯಗಳ ಸಾಂಸ್ಕೃತಿಕ ಮಹತ್ವವೇನು? ಅವುಗಳಿಗಿರುವ ಚಾರಿತ್ರಿಕ ಹಿನ್ನೆಲೆ ಯಾವುದು? ಎಂದೆಲ್ಲ ವಿಚಾರಿಸಿದ ಬ.ಮ. ಜನಪದ ಸಂಗೀತವನ್ನು ತಿಳಿಸಲೆತ್ನಿಸಿದ್ದು ಗಮನಾರ್ಹ ಸಂಗತಿ. ಹೀಗಾಗಿ ಅವರ ಪ್ರಸ್ತುತ ಥೀಸಿಸ್ ಕೂಡ ಜನಪದ ಸಾಹಿತ್ಯ ಮತ್ತು ಜನಪದ ಸಂಗೀತಗಳ ಸರಿಬೆರಕೆಯ ಸಂಶೋಧನಾಧ್ಯಯನವಾಗಿದೆ. ಇದು ಅವರು ಅಧ್ಯಯನಕ್ಕೆ ಇರಿಸಿಕೊಂಡ ಮೂಲ ಆಶಯವೂ ಆಗಿದೆ. ಸಣ್ಣಾಟ(ಡಪ್ಪಿನಾಟ) ದೊಡ್ಡಾಟ (ಮೂಡಲಪಾಯ) ಮತ್ತು ಶ್ರೀಕೃಷ್ಣ ಪಾರಿಜಾತ ಬಯಲಾಟಗಳು ಉತ್ತರ ಕರ್ನಾಟಕ ಜನಪದ ರಂಗಪರಂಪರೆಯನ್ನು ಶ್ರೀಮಂತಗೊಳಿಸಿದ ಜನಪದ ರಂಗಪ್ರಕಾರಗಳು. ನಮ್ಮ ಜನಪದ ರಂಗಭೂಮಿ ಪರಂಪರೆಗೆ ಕಾರಣವಾದ ಇವುಗಳನ್ನು ಕುರಿತ ಆಳವಾದ ಸಂಶೋಧನಾ ಅಧ್ಯಯನದ ಕೃತಿ ಉ.ಕ. ಬಯಲಾಟಗಳು. ಬ.ಮ. ಅವರ ವಿಪುಲವಾದ ಕ್ಷೇತ್ರಕಾರ್ಯ, ತಲಸ್ಪರ್ಶಿ ಅಧ್ಯಯನದ ಪ್ರತಿಫಲವಾಗಿ ಮೂಡಿಬಂದುದು ಪ್ರಸ್ತುತ ಕೃತಿ. ಜಾನಪದ ಬಹುಮುಖೀ ಜ್ಞಾನವುಳ್ಳ ಬ.ಮ. ಬಯಲಾಟಗಳ ಅಂತಃಸತ್ವವನ್ನು ಅರಿತವರು. ಹಾಗಾಗಿ ಈ ಮಹಾಪ್ರಬಂಧ ಅವರಿಂದ ಸಹಜವಾಗಿ ಒಡಮೂಡಿದೆ. ಪ್ರವೇಶ, ಕನ್ನಡ ಬಯಲಾಟ: ಪರಿಸರ ಪ್ರೇರಣೆ, ಯಕ್ಷಗಾನದ ಉದಯ, ಮೂಡಲಪಾಯ, ಡಪ್ಪಿನಾಟ, ಪಾರಿಜಾತ, ಸಮಾರೋಪ-ಗಳೆಂಬ ಹಲವು ಅಧ್ಯಾಯಗಳಲ್ಲಿ ಪ್ರಸ್ತುತ ಕೃತಿ ತೆರೆದುಕೊಂಡಿದೆ. ಅಡುಸೋಗುಗಳು, ಮೂಡಲಪಾಯ-ಕವಿ, ಕೃತಿಸೂಚಿ, ಡಪ್ಪಿನಾಟ ಕವಿ, ಕೃತಿಸೂಚಿ, ಪಾರಿಜಾತ ಕೃತಿಗಳು, ಕೊರವಂಜಿ ಕೃತಿಗಳು, ಸಹಾಯಕ ಸಾಹಿತ್ಯ, ವಿಷಯಸೂಚಿಗಳೆಂಬ ಅನುಬಂಧಗಳನ್ನು ಮೂಲಕ್ಕೆ ಪೂರಕವಾಗಿ ಜೋಡಿಸಿದ್ದು ವಿಶೇಷ.

ದೊಡ್ಡಾಟಕ್ಕಿಂತ ಮೂಡಲಪಾಯ ಶಬ್ದ ಹೆಚ್ಚು ಪ್ರಾಚೀನ ಮತ್ತು ವ್ಯಾಪಕವಾದುದು; ಸಣ್ಣಾಟದ ಮೂಲ ಹೆಸರು ಡಪ್ಪಿನಾಟ; ಶ್ರೀಕೃಷ್ಣ ಪಾರಿಜಾತ ಸ್ವತಂತ್ರ ರಂಗಪ್ರಕಾರ; ಕೌಜಲಗಿ ನಿಂಗಮ್ಮ ಮೊದಲ ನಟಿ..... ಇತ್ಯಾದಿಯಾದ ಮಹತ್ವದ ಅಂಶಗಳನ್ನು ಮೊಟ್ಟಮೊದಲು ಈ 'ಥಿಸಿಸ್'ನಲ್ಲಿ ದೃಢಪಡಿಸಿದವರು ಬ.ಮ.

'ಪ್ರಾಚೀನ ಕರ್ನಾಟಕದಲ್ಲಿ ನಾಟಕ ಪರಂಪರೆ', ಹಂಪಿ–ಒಂದು ಪರಿಚಯ, ಹಂಪೆಯ ಹರಿಹರ, ಹರಿಹರನ ಹನ್ನೊಂದು ರಗಳೆಗಳು(ಸಂ), ಮಹಾಕವಿ ಹರಿಹರನ ಕೃತಿಗಳ ಪದಕೋಶ, ಸಾಮಾನ್ಯರ ಸ್ವಾಮೀಜಿ (ಸಂ), ಶರಣರು ಮತ್ತು ಕಾಯಕ, ಕವಿಭೂಷಣ (ಸಂ), ಆನಂದಕಂದ ಸ್ಮರಣ ಸಂಚಿಕೆ, ಬೆಳುವಲ (ಸಂ), ಆನಂದಕಂದ ಅಭಿನಂದನ ಗ್ರಂಥ, ವೀರಶೈವ ಮಣ್ಯ ಪುರುಷರು ಸಂ:೧ (ಸಂ) ಹಾಗೂ ಸಂ:೨ ಇಂಚರ (ಸಂ) ಎನ್. ತಿಪ್ಪಣ್ಣ ಅಭಿನಂದ ಗ್ರಂಥ; ಬಸವಣ್ಣನವರ ವಚನಗಳು (ಸಂ) ವ್ಯಾಕರಣ ತೀರ್ಥ(ಸಂ) ಚಂದ್ರಶೇಖರ ಶಾಸ್ತ್ರಿ ಅವರ ವಾಚಿಕೆ, ಉರವಕೊಂಡ ಶ್ರೀ ಚೆನ್ನಬಸವಸ್ವಾಮಿಗಳು, ವಿಭಾವ (ಸಂ) ಡಾ. ಎಂ.ಬಿ. ಕೊಟ್ರಶೆಟ್ಟಿ, ಸ್ಮರಣ ಗ್ರಂಥ, ಕಾವ್ಯಸಂಗಮ (ಸಂ), ಶರಣ ಪರಂಪರೆ, ಎನಗಿಂತ ಕಿರಿಯರಿಲ್ಲ (ಸಂ) ಅಗಡಿ ಸಂಗಣ್ಣ ಅಭಿನಂದನ ಗ್ರಂಥ, ಕೊಪಣಾಚಲದ ಸಂಗಣ್ಣ, ಬೆಲ್ಲದ ಚೆನ್ನಪ್ಪನವರು, ಹರಿದ ಹೆದ್ದೊರೆ (ಸಂ)......... ಮುಂತಾದುವು ಡಾ। ಮಲಶೆಟ್ಟಿಯವರ ಇತರ ಕೃತಿಗಳು.

**ಬಿಡಿ ಲೇಖನಗಳು :** ಮಲಶೆಟ್ಟಿ ಅವರು ರಾಜ್ಯಮಟ್ಟದ, ರಾಷ್ಟ್ರಮಟ್ಟದ ವಿಶ್ವವಿದ್ಯಾಲಯ ಮಟ್ಟದ ಹಲವಾರು ವಿಚಾರಸಂಕಿರಣ–ಸಭೆ–ಸಮಾರಂಭಗಳಲ್ಲಿ ಭಾಗವಹಿಸಿ ವಿದ್ವತ್‌ಪೂರ್ಣ ಪ್ರಬಂಧಗಳನ್ನು ಮಂಡಿಸಿದ್ದಾರೆ. ಅವುಗಳಲ್ಲಿ ಕೆಲವನ್ನು ಆಯ್ದು 'ಆಯ್ದ ಲೇಖನಗಳು' – ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಇಲ್ಲಿ ಕೈಗೆ ದೊರೆತ ಕೆಲವನ್ನು ಪರಿಶೀಲಿಸಲಾಗಿದೆ.

**'ಕನ್ನಡ ಜನಪದ ಸಾಹಿತ್ಯದಲ್ಲಿ ಮನುಷ್ಯನ ಪರಿಕಲ್ಪನೆ'**– ಎನ್ನುವ ಲೇಖನದಲ್ಲಿ ಜನಪದರು ವಾಸ್ತವದಲ್ಲಿ ಕಾಣಲಾರದ್ದನ್ನು ಕನಸಿನಲ್ಲಾದರೂ ಕಂಡು

ಸುಖಿಸುತ್ತಾರೆ. ಈ ಕನಸುಗಾರಿಕೆ ಜನಪದ ಸಾಹಿತ್ಯದಲ್ಲಿ ಸಮೃದ್ಧವಾಗಿ ಬಂದುದನ್ನು ಉದಾಹರಣೆಗಳ ಮೂಲಕ ವಿವರಿಸಿದ್ದಾರೆ. ಬಡವರ ಕನಸು ನನಸಾಗುವ ಅನೇಕ ಉದಾಹರಣೆಗಳನ್ನು ನೀಡುತ್ತಾರೆ. ಬಡವರು-ನಿರಾಶ್ರಿತರು ತಮ್ಮ ಸಮಸ್ಯೆಗಳಿಂದ ಪಾರಾಗಲು ಕನಸನ್ನು ಆಶ್ರಯಿಸುತ್ತಿರುವುದಕ್ಕೆ ನಿದರ್ಶನಗಳನ್ನು ಕೊಡುತ್ತಾರೆ. ಕನಸುಕಾಣುವುದರಿಂದ ಜಾತೀಮತ ಬಡತನವನ್ನು ಮರೆಯಲು ಸಾಧ್ಯ ಎಂದೆಲ್ಲ ಹೇಳುತ್ತ ಕನಸುಗಾರಿಕೆ ಅತೃಪ್ತ ಕಾಮನೆಗಳನ್ನು ಸಾಂತ್ವನಗೊಳಿಸುತ್ತದೆ, ಒಮ್ಮೊಮ್ಮೆ ತಮಾಷೆಯನ್ನುಂಟು ಮಾಡುತ್ತದೆನ್ನುತ್ತಾರೆ. ಜಾತ್ಯಾತೀತ ಮನುಷ್ಯನ ಪರಿಕಲ್ಪನೆ ಕೂಡ ಜಾನಪದದತ್ತ ಎಂಬುದನ್ನು ಹಾಡು, ಕತೆಗಳ ಮೂಲಕ ಸ್ಪಷ್ಟಪಡಿಸುತ್ತಾರೆ. ಜನಪದ ಸಾಹಿತ್ಯದಲ್ಲಿ ನಿರೂಪಿತವಾದ ಹೆಣ್ಣಿನ ವಿವಿಧ ಮುಖಗಳನ್ನು ಪರಿಚಯಿಸುತ್ತಾರೆ. ಹೆಣ್ಣು ತಾಯಿ, ಮಲತಾಯಿ, ಅತ್ತೆಸೊಸೆ, ಅತ್ತಿಗೆನಾದಿನಿ, ಸವತಿ ಹೆಂಡತಿ ಅಜ್ಜಿ, ಹೀಗೆ ವಿವಿಧ ಸ್ತರಗಳಲ್ಲಿ ತನ್ನನ್ನು ಬಿಚ್ಚಿಕೊಳ್ಳುತ್ತಾಳೆಂಬುದನ್ನು ತ್ರಿಪದಿಗಳ ಸಹಾಯದಿಂದ ವಿವರಿಸುತ್ತಾರೆ. ಹೆಣ್ಣಿನ ಶೀಲ, ಸದ್ಗುಣ, ಚಾರಿತ್ರ್ಯ, ಕುರಿತೂ ಜನಪದ ಹಾಡು-ಕತೆಗಳ ಮೂಲಕ ಚರ್ಚಿಸುತ್ತಾರೆ. ಮನುಷ್ಯನ ಬದುಕಿನ ಬಗೆಗೆ ಜನಪದ ಮನಸ್ಸು ನೀಡುವ ವ್ಯಾಖ್ಯೆಗಳು ಸರಳ ಮತ್ತು ಮೌಲಿಕವಾಗಿವೆ ಎಂದೂ ಮಲಶೆಟ್ಟಿ ವ್ಯಾಖ್ಯಾನಿಸುತ್ತಾರೆ. ಮನುಷ್ಯನ ಗುಣವಿಶೇಷತೆಗಳಾದ ಉಪಕಾರಬುದ್ಧಿ, ಜಾತ್ಯಾತೀತ ಮನೋಭಾವ, ಸಹಕಾರ, ತಾಳ್ಮೆ.... ಮುಂತಾದವನ್ನು ಪ್ರಸ್ತುತ ಲೇಖನದಲ್ಲಿ ತಿಳಿಸಲೆತ್ನಿಸಿದ್ದಾರೆ.

**ಜನಪದ ಸಾಹಿತ್ಯದಲ್ಲಿ ಬಸವಣ್ಣ :** ೧೨ನೇ ಶತಮಾನದ ಶಿವಶರಣರ ಬಗೆಗೆ ಜನಪದರು ಅಪಾರ ಭಕ್ತಿ-ನಿಷ್ಠೆಯನ್ನಿರಿಸಿಕೊಂಡಿದ್ದರು. ಶಿವಶರಣರು ಶಿವನ ಅಪ್ಪಣೆಯಂತೆ ನಮ್ಮನ್ನುದ್ಧರಿಸಲು ಈ ಲೋಕಕ್ಕೆ ಬಂದ ಮಹಿಮಾಶಾಲಿಗಳು ಎಂಬ ಅಚಲ ನಂಬಿಕೆ ಜನಪದರಲ್ಲಿ ಗಾಢವಾಗಿ ಬೆಳೆದುಬಂದಿತು. ಇದರ ಪರಿಣಾಮವಾಗಿ ಅನೇಕ ಜನಪದ ಹಾಡುಗಳು ಹುಟ್ಟಿಕೊಂಡವು ಅದರಲ್ಲಿಯೂ ಬಸವಣ್ಣನ ಕುರಿತಾಗಿ ವಿಪುಲಹಾಡುಗಳು ಬಂದಿವೆ. ಈ ಹಾಡುಗಳಿಗೆ ಚಾರಿತ್ರಿಕ ಹಿನ್ನೆಲೆಯಿದ್ದುದನ್ನೂ ಈ ಲೇಖನದಲ್ಲಿ ಲೇಖಕರು ಗುರುತಿಸಿದ್ದಾರೆ.

ಗ್ರಾಮೀಣ ಕೃಷಿಕರಿಗೆ ಎತ್ತು ಪೂಜ್ಯಪ್ರಾಣಿ. ಎತ್ತನ್ನು ನಂದಿ ಎಂದು ಪೂಜಿಸತೊಡಗಿದರು. ಬಸವಣ್ಣ ಶಿವನ ವಾಹನವಾದ ನಂದಿಯ ಅವತಾರ ಎಂಬ ಪೌರಾಣಿಕ ಕಲ್ಪನೆ ಜನಪದದಲ್ಲಿ ನಂದಿಪೂಜಾ ಪರಂಪರೆಗೆ ಮತ್ತಷ್ಟು ಬಲತಂದುಕೊಟ್ಟಿತು. ನಂದಿ ಮತ್ತು ಕಲ್ಯಾಣದ ಬಸವಣ್ಣ ಅಭೇದರಾದರು. ಬಸವಣ್ಣನನ್ನು ನಂದಿ ರೂಪದಲ್ಲಿ ಪೂಜಿಸುವುದರಲ್ಲಿ ಜನಪದರು ಸಾರ್ಥಕತೆ ಕಂಡುಕೊಂಡರೆಂದು ಮಲಶೆಟ್ಟಿ ಅವರು ಸರಿಯಾಗಿ ಗುರುತಿಸಿದ್ದಾರೆ. ಶರಣರ ಬಗೆಗಿನ ಭಕ್ತಿಶ್ರದ್ಧೆಯನ್ನು ಹಂತಿಯ ಹಾಡು, ತ್ರಿಪದಿಗಳಲ್ಲಿ ಜನಪದರು ತೋಡಿಕೊಂಡಿದ್ದಾರೆ.

ಜನಪದರು 'ಬಸವಪುರಾಣ' ವನ್ನು ಕೇಳಿ ತಿಳಿದುದರಿಂದ, 'ಜನಪದ ಬಸವಪುರಾಣ' ಹುಟ್ಟಲು ಸಾಧ್ಯವಾದಂತೆ ತೋರುತ್ತದೆ. ಪಿ.ಕೆ. ರಾಜಶೇಖರ ಅವರು 'ಜನಪದ ಬಸವ ಪುರಾಣ'ವನ್ನು ಸಂಪಾದಿಸಿದ್ದಾರೆ. ಇದರಲ್ಲಿ ವಿವಿಧ ಶರಣರ ಹಾಡುಗಳೂ ಇವೆ. ಇಂಥ ಬೃಹತ್‌ಕೃತಿಯನ್ನು ಇಲ್ಲಿಯ ಚಿಕ್ಕ ಲೇಖನದಲ್ಲಿ ಮಲಶೆಟ್ಟಿ ಅವರು ವಿಶ್ಲೇಷಿಸಿದ್ದಾರೆ. ಲಾವಣಿ, ಗೀಗೀ, ಡೊಳ್ಳಿನ ಹಾಡು, ಭಜನೆಪದ, ಕೋಲಾಟ ಪದ..... ಮುಂತಾದ ಜನಪದ ಗೀತೆಗಳಲ್ಲಿ ಬಸವಣ್ಣನನ್ನು ಕುರಿತು ಜನಪದರು ಹಾಡಿಹೊಗಳಿದುದನ್ನು ಲೇಖಕರು ಉಲ್ಲೇಖಿಸುತ್ತಾರೆ. ಆದರೆ, 'ಜನಪದ ಗೀತ ಸಾಹಿತ್ಯದಲ್ಲಿ ಕಲ್ಯಾಣದ ಬಸವಣ್ಣ' ಎಂಬ 'ಥೀಸಿಸ್'ಅನ್ನು ಲೇಖಕರು ಗಮನಿಸಿದಂತಿಲ್ಲ.

**ಹಾರ್ಮೋನಿಯಂ ಮತ್ತು ಜನಪದ ಕಲೆಗಳು** – ಪಾಶ್ಚಾತ್ಯರ ಹಾರ್ಮೋನಿಯಂ–ಗಾಳಿವಾದ್ಯ ಮೂಡಲಪಾಯ ದೊಡ್ಡಾಟ, ಅಲ್ಲಮಪ್ರಭು, ನಿಜಗುಣ ಶಿವಯೋಗಿಯಂಥ ಎರಡನೇ ಘಟ್ಟದ ಸಣ್ಣಾಟಗಳಲ್ಲಿ–ಪಾರಿಜಾತದಲ್ಲಿ ಅನ್ಯೋನ್ಯವಾಗಿ ಬೆರೆತುಕೊಂಡುದನ್ನು ವಿವರಿಸುವ ಕುತೂಹಲಕರ ಟಿಪ್ಪಣಿ ರೂಪದ ಲೇಖನವಿದು.

**ಜನಪದಕಲೆಗಳ ಅಸ್ತಿತ್ವ ಮತ್ತು ಸವಾಲು** – ಜನಪದ ಪ್ರದರ್ಶನಾತ್ಮಕ ರಂಗಕಲೆಗಳ ಅಸ್ತಿತ್ವ ಮತ್ತು ಇಂದಿನ ಸಂದರ್ಭದಲ್ಲಿ ಅವು ಎದುರಿಸುತ್ತಿರುವ ಸವಾಲುಗಳನ್ನು ಕುರಿತು ಈ ಲೇಖನದಲ್ಲಿ ಮಲಶೆಟ್ಟಿ ಅವರು ಚರ್ಚಿಸಿದ್ದಾರೆ. ಜನಪದ

ಕಲೆಗಳು ಹುಟ್ಟಿದ್ದು ಮೂಲತಃ ಮನೋರಂಜನೆಯ ಉದ್ದೇಶಕ್ಕಾಗಿ. ನಂತರದ ಅವಧಿಯಲ್ಲಿ ಅವುಗಳಲ್ಲಿ ಧಾರ್ಮಿಕ, ಸಾಮಾಜಿಕ ಉದ್ದೇಶಗಳು ಕೂಡಿಕೊಂಡವು. ಮನುಷ್ಯ ಧಾರ್ಮಿಕ ವಿಧಿಗಳನ್ನು ರೂಢಿಗೆ ತರುವ ಮೊದಲೇ ಹಾಡು-ಕುಣಿತಗಳನ್ನು ಸ್ವಸಂತೋಷಕ್ಕಾಗಿ ರೂಢಿಸಿಕೊಂಡಿದ್ದು, ಧಾರ್ಮಿಕ ಆಚರಣೆಗಳಿಗೆ ಅವನ್ನು ಪೂರಕವಾಗಿ ಬಳಸಿಕೊಂಡನೆಂದು ಪುರವಂತರು, ಗೊಂದಲಿಗರು, ಗೊರವರು, ಜೋಗತಿಯರು ಮುಂತಾದವರ ಉದಾಹರಣೆಗಳ ಮೂಲಕ ಸ್ಪಷ್ಟಪಡಿಸುತ್ತಾರೆ.

ಆಧುನಿಕ ಜೀವನಶೈಲಿಯಿಂದಾಗಿ ಜನಪದಕಲೆಗಳು ಮೊದಲಿನಂತಿಲ್ಲ. ಜೋಗತಿಯರು ಕಡಿಮೆಯಾಗುತ್ತಿದ್ದಾರೆ. ಕಿಳ್ಳಿಕ್ಯಾತರ ತೊಗಲುಗೊಂಬೆಯಾಟ ನೋಡುವವರು ಇಲ್ಲ. ಗೊಂದಲಿಗರ, ಕಿನ್ನರಿ ಜೋಗಿಗಳ ಕತೆ ಕೇಳುವವರಿಲ್ಲ. ಗ್ರಾಮೀಣ ಯುವಕರಲ್ಲಿ ಸಹನೆ, ಪರಿಶ್ರಮ ಇಲ್ಲ. ಆ ಕಲೆಗಳನ್ನು ಕಲಿಯಲಾರರು; ಹಗಲುವೇಷಗಾರಿಕೆ ಅವರ ಮಕ್ಕಳಿಗೆ ಭಿಕ್ಷಾಟನೆ ಎನಿಸಿದೆ. ಹೀಗಾಗಿ ಕಲೆಗಳು ಮಾಯವಾಗುತ್ತಿವೆ. ಅನೇಕ ಸವಾಲುಗಳನ್ನು ಜನಪದ ಕಲೆಗಳು ಎದುರಿಸುತ್ತಿವೆ ಎಂದು ಹೇಳಿ ಕೆಲವು ಕಲೆಗಳನ್ನು ಪರಿಷ್ಕರಿಸಿ ಉಳಿಸಿಕೊಳ್ಳಬಹುದೆಂದೂ ಲೇಖಕರು ವಿಚಾರಮಾಡುತ್ತಾರೆ.

**ಹಂಸನೂರಿನ ದಾಸರಾಟ** – ಇದು ೭೦/೮೦ ವರುಷಗಳ ಹಿಂದಿನ ಉತ್ತರ ಕರ್ನಾಟಕದ ಜನಪ್ರಿಯ ರಂಗಕಲೆ. ಆಧುನಿಕತೆಯ ಪರಿಣಾಮವಾಗಿ ಇಂದು ಇತಿಹಾಸದ ಪುಟ ಸೇರಿ ಮರೆಯಾಗಿದೆ. ಈಗಿರುವ ಹಿರಿಯ ಜನಪದ ಕಲಾವಿದರು ದಾಸರಾಟದ ಹೆಸರು ಕೇಳಿದ್ದಾರೆ. ಆಟವನ್ನು ನೋಡಿಲ್ಲ. ಅಂಥದರಲ್ಲಿ 'ದಾಸರಾಟ'ವನ್ನು ಕಣ್ಣಾರೆ ಕಂಡು ಈ ಚಿಕ್ಕಲೇಖನವನ್ನು ಮಲಶೆಟ್ಟಿ ಅವರು ಬರೆದಂತೆ ಭಾಸವಾಗುತ್ತದೆ. ಅವರೇ ಹೇಳಿದಂತೆ ದಾಸರಾಟದ ಕೊನೆಯಕೊಂಡಿ ಬಾದಾಮಿ ತಾಲ್ಲೂಕಿನ ಹಂಸನೂರಿನಲ್ಲಿತ್ತು. ಸ್ತ್ರೀ ಪಾತ್ರಗಳೇ ಇದರಲ್ಲಿ ಹೆಚ್ಚು ಇದ್ದವು. ಹಾಡು-ಕುಣಿತ ಮುಖ್ಯ. ಆದರೆ ನಮ್ಮ ಸಣ್ಣಾಟಗಳ ಗಾಂಭೀರ್ಯ ದಾಸರಾಟಕ್ಕೆ ಇಲ್ಲ. ಆದುದರಿಂದಲೇ 'ದಾಸರಾಟ ಆಟವಲ್ಲ,

ದೋಸೆಊಟ ಊಟವಲ್ಲ' ಎಂಬ ಗಾದೆ ರೂಢಿಯಲ್ಲಿದೆ. ಇದೊಂದು ಮೋಜಿನ ಆಟವಷ್ಟೇ! ನಿರ್ದಿಷ್ಟ ಕತೆ, ಸಂವಿಧಾನ ಇದಕ್ಕಿಲ್ಲ, ರಂಗ ಮಂಟಪ ಕೂಡ ಇದಕ್ಕಿಲ್ಲ. ಮುಖಕ್ಕೆ ಬಣ್ಣ ಇಲ್ಲ, ಕೊರಳಲ್ಲಿ ಸರಹಾಕಿಕೊಂಡು, ಕಾಲಲ್ಲಿ ಗೆಜ್ಜೆಕಟ್ಟಿಕೊಂಡು ಹಾಡು-ಕುಣಿತ ಮಾಡುತ್ತಾರೆ (ನಟಿಯರು). ಅಭಿನಯ ಕೂಡ ಮಾಡುತ್ತಾರೆ. ಗೊಡ್ಡಿಭೀಮ ದಾಸರಾಟದ ಭಾಗವತ. ಈತನ ಜತೆಗೆ ನಟಿಯರು ಮನಬಂದಂತೆ ಸಂಭಾಷಣೆಗಿಳಿಯುತ್ತಾರೆ. ಲಾವಣಿ, ತತ್ವಪದ, ಸಿನೇಮಾಹಾಡು ಇತರ ಪದಗಳನ್ನು ಕುಣಿಯುತ್ತಲೇ ಹಾಡುತ್ತಾರೆ. ಒಟ್ಟಾರೆ, ದಾಸರಾಟದ ಪ್ರಯೋಗ ಹಾಡು-ಕುಣಿತ-ಸಂಭಾಷಣೆ-ಅಶ್ಲೀಲ ಮಾತುಗಳ ಸಮ್ಮಿಶ್ರಣವಾಗಿತ್ತೆಂದು ಮಲಶೆಟ್ಟಿ ತಿಳಿಸುತ್ತಾರೆ. ಇಲ್ಲಿಯ ಗೊಡ್ಡಿಭೀಮನೇ ಪಾರಿಜಾತ ಭಾಗವತ ಪಾತ್ರ ಕಲ್ಪನೆಗೆ ಮೂಲವಾಗಿರಬಹುದು. ಈತ ಹಾಸ್ಯಮಾಡುತ್ತಾನೆ, ಹಾಸ್ಯದ ಕತೆಹೇಳುತ್ತಾನೆ. ಜೋಕ್‌ಮಾಡುತ್ತಾನೆ, ಅಡಸೋಗು ಹಾಕುತ್ತಾನೆ (ಗೊಡ್ಡಿಭೀಮ). ನಟಿಯರು ಈತನಿಗೆ ಸಹಕರಿಸುತ್ತಾರೆ. ಗೊಡ್ಡಿ ಭೀಮನಿಗೆ ಜತೆಗಾರನಾಗಿರುವವನು 'ಜವಾರಿ'. ಈತನು ಪಾರಿಜಾತದ ಮರಿಭಾಗವತನಾದ ಪಾತ್ರಧಾರಿ ಎಂದೂ ಮಲಶೆಟ್ಟಿ ಅವರು ತಾರ್ಕಿಕವಾಗಿ ಬರೆಯುತ್ತಾರೆ. ಒಮ್ಮೊಮ್ಮೆ ಗೊಡ್ಡಿಭೀಮ-ಜವಾರಿ ಇವರ ಸಂಭಾಷಣೆ ಪ್ರಯೋಗದ ಪ್ರಧಾನ ಭಾಗವೆನಿಸುತ್ತದೆ. ಈ ಆಟಕ್ಕೆ ಓಮ್ಮೇಳ ಕೂಡ ಇರುತ್ತದೆನ್ನುತ್ತಾರೆ. ಈ ಬಗೆಯ ಆಟವನ್ನು ದಾಖಲಿಸಿಕೊಂಡಂತಿಲ್ಲ.

**ಬಹುರೂಪಿಗಳು** – ಬಹುರೂಪಿ/ಜಾತಿಗಾರ ವೃತ್ತಿಕಲಾವಿದರು ಮತ್ತು ಅವರ ಕಲೆಯನ್ನು ಪರಿಚಯಿಸುತ್ತ ಜನಪದಕ್ಕೆ ಅವರು ನೀಡಿದ ಅನನ್ಯ ಕೊಡುಗೆಯನ್ನು ಸಂಗ್ರಹಿಸಿಕೊಡುತ್ತ, ರಂಜನೆ ಮತ್ತು ಬೋಧನೆಗಳನ್ನು ಗ್ರಾಮೀಣರಿಗೆ ನೀಡುತ್ತ ಬಂದಿರುವ ಅಪರೂಪದ ಕಲಾವಿದರು ಬಹುರೂಪಿಗಳು ಮಾತ್ರವಲ್ಲ, ಜನಸಾಮಾನ್ಯರಿಗೆ ಪುರಾಣ-ಇತಿಹಾಸಗಳನ್ನು ಪರಿಚಯಿಸುತ್ತ ಬಂದ ಮಹತ್ವದ ಕಲಾವಿದರಿವರು. ಇವರ ರಂಗಪ್ರದರ್ಶನವು ಜನಪದ ರಂಗಪರಂಪರೆಯ ಮಹತ್ವದ ಅಂಗವಾದುದನ್ನು ಪ್ರಸ್ತುತ ಲೇಖನದಲ್ಲಿ ಲೇಖಕರು ಗುರುತಿಸಿದ್ದು ಗಮನೀಯ.

**ಜನಪದ ರಂಗಭೂಮಿ ಮಹಿಳೆ** – ದಾಸರಾಟದಿಂದಲೇ ದಾಸರ ಹೆಣ್ಣುಮಕ್ಕಳು ಜನಪದ ರಂಗಭೂಮಿಯನ್ನು ಏರುವಂತಾಯಿತೆನ್ನುತ್ತಾರೆ ಮಲಶೆಟ್ಟಿ ಅವರು. ನಂತರದಲ್ಲಿ ಶ್ರೀಕೃಷ್ಣಪಾರಿಜಾತ, ಸಂಗ್ಯಾಬಾಳ್ಯಾ, ರಾಧಾನಾಟಗಳಲ್ಲಿ ಮಹಿಳೆ ಸ್ತ್ರೀಪಾತ್ರ ಮಾಡತೊಡಗಿದಳು. ಮೊದಲಿನಿಂದ ಈವರೆಗೂ ದಾಸರ ಹೆಣ್ಮಕ್ಕಳೇ ಜನಪದ ರಂಗಕ್ಕಿಳಿದವರು. ಮುಂದೆ ಇವರೇ ಕಂಪೆನಿ ನಾಟಕಗಳಲ್ಲಿ ಪಾತ್ರ ಮಾಡತೊಡಗಿದರು. ಕೌಜಲಗಿ ನಿಂಗಮ್ಮ, ನಾವಲಗಟ್ಟಿ ಸಾಂವಕ್ಕ, ಚಂದ್ರವ್ವ... ಮೊದಲಾದವರು ಪಾರಿಜಾತ ಸ್ತ್ರೀಪಾತ್ರಧಾರಿಗಳು. ರಾಧಾನಾಟದಲ್ಲಿ, ಬಸವಂತ, ಬಲವಂತ, ಶಿಪಾಯಿ ಆಟ, ಕಡ್ಲಿಮಟ್ಟಿ ಸ್ಟೇಷನ್ ಮಾಸ್ತರ್ ಇತ್ಯಾದಿ ಸಣ್ಣಾಟಗಳಲ್ಲಿ ಸ್ತ್ರೀಯರೇ ಪಾತ್ರಧಾರಿಗಳು. ಅಲತಗಿಯಮನವ್ವ, ಮಲ್ಲವ್ವ ಮ್ಯಾಗೇರಿ, ಹಿಡಕಲ್ ಮಾಲಾ, ಲಲಿತಾ ಪಾತ್ರೋಟ, ಕಮಲವ್ವ ಮೆಟಗುಡ್ಡ ಮುಂತಾದವರು ಸಣ್ಣಾಟಗಳ ಸ್ತ್ರೀಪಾತ್ರಧಾರಿಗಳು.

ಇವರ ನಂತರ ಸಣ್ಣಾಟಗಳಲ್ಲಿ ಸ್ತ್ರೀಪಾತ್ರ ಮಾಡುವ ಮಹಿಳೆಯರು ಯಾರು? ಎಂಬ ಪ್ರಶ್ನೆ ಇಂದು ಉದ್ಭವಿಸಿದೆ. ನಮ್ಮ ದೊಡ್ಡಾಟಗಳಲ್ಲಿ ಮಾತ್ರ ಸ್ತ್ರೀಪಾತ್ರವನ್ನು ಪುರುಷರೇ ನಿರ್ವಹಿಸುತ್ತ ಬಂದಿದ್ದಾರೆ; ಕ್ವಚಿತ್ತಾಗಿ ಸ್ತ್ರೀಯರು. ಯಕ್ಷಗಾನದಲ್ಲಿ ಸ್ತ್ರೀಪಾತ್ರಗಳನ್ನು ಮಹಿಳೆಯರೇ ವಹಿಸುತ್ತಾರೆ. ಅಷ್ಟೇ ಏಕೆ? ಸ್ತ್ರೀಯರ ಯಕ್ಷಗಾನ ಮಂಡಳಿಗಳೂ ಇರುವುದನ್ನು ಲೇಖಕರು ಸಂಗ್ರಹಿಸಿ ಬರೆಯುತ್ತಾರೆ.

**ಸಂಗೊಳ್ಳಿರಾಯಣ್ಣ : ಇತಿಹಾಸ ಮತ್ತು ಜಾನಪದ** – ಪ್ರಸ್ತುತ ಲೇಖನದಲ್ಲಿ ಒಂದು ಸಮುದಾಯದ ಜನ, ಐತಿಹಾಸಿಕ ವ್ಯಕ್ತಿಯಾದ ರಾಯಣ್ಣನನ್ನು ಲಾವಣಿ ಮೂಲಕ ದೈವತ್ವದ ನೆಲೆಗೇರಿಸಿ ಧನ್ಯತೆ ಕಂಡುಕೊಂಡುದನ್ನು ವಿವರಿಸಲಾಗಿದೆ. ಅವನ ಸಮಾಧಿಯ ಮೇಲೆ ಬೆಳೆದ ಆಲದಮರ ಆರಾಧ್ಯವಸ್ತುವಾದರೆ, ರಾಯಣ್ಣ ಪುತ್ರಸಂತಾನ ಕರುಣಿಸುವ ದೇವರಾದ. ಒಂದು ಜನಾಂಗ ಒಬ್ಬ ವ್ಯಕ್ತಿಯ ಬಗೆಗೆ ವ್ಯಕ್ತಪಡಿಸುವ ಗರಿಷ್ಠಗೌರವ ಇದಾಗಿದೆಯೆಂದು ಮಲಶೆಟ್ಟಿ ಅವರು ಹೇಳಿದುದು ನಿಜವೆನಿಸುತ್ತದೆ.

**ದೊಡ್ಡಾಟ ಒಂದು ಹೊಸ ಪ್ರಯೋಗ** – ಈ ಲೇಖನದಲ್ಲಿ ಗಿರಿಜಾಕಲ್ಯಾಣದ ಕಥೆಯನ್ನು ಆರಿಸಿಕೊಂಡು ದೊಡ್ಡಾಟ ರೂಪಕ್ಕಿಳಿಸಿ–ಯಶಸ್ವೀ ಹೊಸ ಪ್ರಯೋಗ ಮಾಡಿದುದರ ಸ್ವಾನುಭವವನ್ನು ಲೇಖಕರು ಹಂಚಿಕೊಂಡಿದ್ದಾರೆ; ಆ ಮೂಲಕ ದೊಡ್ಡಾಟದ ಬಗೆಗೆ ಅವರಿಗಿರುವ ಪ್ರೀತಿ ಕಾಳಜಿಗಳು ಇಲ್ಲಿ ವ್ಯಕ್ತವಾಗುತ್ತದೆ. **ಜನಪದ ರಂಗಭೂಮಿ** – ಇದರ ಹುಟ್ಟು–ವಿಕಾಸ–ಸ್ವರೂಪ–ಭವಿಷ್ಯ ಕುರಿತಾದ ಚಿಂತನಾರ್ಹ ಲೇಖನವಿದು. ಈ ರಂಗಭೂಮಿಯಲ್ಲಿ ಕಳೆದ ಅರ್ಧಶತಮಾನದ ಅವಧಿಯಲ್ಲಿ ಅಷ್ಟಿಷ್ಟು ಹೊಸಪ್ರಯೋಗ ಸಾಧನೆಗಳನ್ನು ಗುರುತಿಸಬಹುದಾದರೂ ನಿಷ್ಕ್ರಿಯತೆಯೇ ಗೋಚರಿಸುತ್ತದೆ. ರಂಗಭೂಮಿ ಆಶಾದಾಯಕವಾಗಲಿಲ್ಲವೆಂಬ ಕೊರಗನ್ನು ಲೇಖಕರು ವ್ಯಕ್ತಪಡಿಸುತ್ತಾರೆ. ಅಂತೆಯೇ **'ಜನಪದ ರಂಗಭೂಮಿ ಮುಂದಿನ ಶತಮಾನದತ್ತ'**–ಲೇಖನದಲ್ಲಿ ಅದರ ಅಳಿವು–ಉಳಿವು ಕುರಿತು ಚರ್ಚಿಸುತ್ತ, ಮೊದಲು ದಾಖಲೀಕರಣಕ್ಕೊಳಪಡಿಸಿ, ಪರಿಷ್ಕರಿಸಿ ಉಳಿಸಿಕೊಳ್ಳುವ ಸಾಧ್ಯತೆ ಇದೆ ಎನ್ನುತ್ತಾರೆ. **'ಗ್ರಾಮಗಳ ಹುಟ್ಟು–ವಿಕಾಸ–ಸ್ವರೂಪ'** ವನ್ನು ಕುರಿತು (ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ) ಲೇಖಕರು ಬರೆದ ಇನ್ನೊಂದು ಲೇಖನ **"ಉತ್ತರ ಕರ್ನಾಟಕದ ಗ್ರಾಮವಿನ್ಯಾಸ"** ಮೆಚ್ಚುವಂಥದು. **"ಸೀತಾಕಲ್ಯಾಣ ಕುರಿತ ಒಂದು ಜನಪದಗೀತೆ"** ಲೇಖನದಲ್ಲಿ ಜನಪದ ಅಂಶಗಳನ್ನು ಗುರುತಿಸುವ ಪ್ರಯತ್ನವಿದೆ. ಜನಪದರು ತಮ್ಮ ಅರಿವಿಗೆ ಬಾರದುದನ್ನು ಎಂದೂ ಆಡಿದವರಲ್ಲ; ಅವರದು ಸಹಜ ಜೀವನದೃಷ್ಟಿ ಮತ್ತು ಸ್ಪಂದನೆ ಎಂಬುದನ್ನು ಗುರುತಿಸಿದ ಮಹತ್ವದ ಲೇಖನವಿದು. ಮಲಶೆಟ್ಟಿ ಅವರು **'ಸಣ್ಣಾಟದ ಸಂಗೀತ'** ಮತ್ತು **'ಜನಪದ ಸಂಗೀತ'** ಕುರಿತು ಬರೆದ ಎರಡೂ ಲೇಖನಗಳು ತುಂಬ ಕುತೂಹಲಕಾರಿಯಾಗಿವೆ. **'ಸಣ್ಣಾಟಗಳ ಉಗಮವಿಕಾಸ', 'ಕಿತ್ತೂರ ಈರವ್ವನನ್ನು ಕುರಿತು ಇತಿಹಾಸ ಮತ್ತು ಜನಪದ ಸಾಹಿತ್ಯ'**.... ಇತ್ಯಾದಿ ಮಲಶೆಟ್ಟಿ ಅವರ ಲೇಖನಗಳು ಮೌಲಿಕವಾಗಿವೆ. ಇವರ ಎಲ್ಲ ಲೇಖನಗಳೂ ಸರಳವಾಗಿವೆ, ಸ್ಪಷ್ಟವಾಗಿವೆ ಮತ್ತು ಖಚಿತವಾಗಿವೆ. ಹೇಳಬೇಕಾದುದನ್ನು ನೇರವಾಗಿ ಬರೆಯುತ್ತಾರೆ. ಅದಕ್ಕೆ ಅವರಿಗಿರುವ ಕ್ಷೇತ್ರಕಾರ್ಯದ ಜ್ಞಾನಾನುಭವವೇ ಕಾರಣವೆಂದು ತೋರುತ್ತದೆ. ಎಲ್ಲ ಲೇಖನಗಳು

ಜಾನಪದಾಸಕ್ತರನ್ನು ಚಿಂತನೆಗೆ ತೊಡಗಿಸುತ್ತವೆ, ಚರ್ಚೆಗೂ ಆಹ್ವಾನಿಸುತ್ತವೆ. ಇವರದು ಯಾವಾಗಲೂ ಹೊಸತರೆಡೆಗೆ ತುಡಿಯುವ ಪ್ರಯೋಗಶೀಲ ಮನಸ್ಸು ಎಂಬುದನ್ನು ಲೇಖನಗಳು ಸಾಕ್ಷೀಕರಿಸುತ್ತವೆ. ಆದರೆ ಕೆಲವು ಲೇಖನಗಳು ಇನ್ನೂ ಏನನ್ನೋ ಹೇಳುತ್ತಾರೆನ್ನುವಷ್ಟರಲ್ಲಿಯೇ ಮುಕ್ತಾಯವಾಗಿಬಿಡುತ್ತವೆ. ಸಮಗ್ರತೆಯ ದೃಷ್ಟಿಯಿಂದ ಮತ್ತು ಅರ್ಥವಿಸ್ತಾರದ ದೃಷ್ಟಿಯಿಂದ ಈ ಲೇಖನಗಳು ಅಧ್ಯಯನದ ಆಳವನ್ನು ಅಪೇಕ್ಷಿಸುತ್ತವೆ.

**ಅಖಿಲಕರ್ನಾಟಕ ಜಾನಪದ ಸಮ್ಮೇಲನದ ಸರ್ವಾಧ್ಯಕ್ಷ ಭಾಷಣದ ಸಾರ** – ಶಿಗ್ಗಾವಿಯಲ್ಲಿ ಜರುಗಿದ ಕ.ವಿ.ವಿ. ೩೩ನೇ 'ಅಖಿಲ ಕರ್ನಾಟಕ ಜಾನಪದ ಸಮ್ಮೇಲನ'ದ ಸರ್ವಾಧ್ಯಕ್ಷರಾಗಿ ಮಲಶೆಟ್ಟಿ ಅವರು ಮಾಡಿದ ಭಾಷಣದ ಸಾರ ಇಂತಿದೆ : "ಜನಪದ ನಮ್ಮ ತಾಯಿ ಇದ್ದಂತೆ. ಅದು ಉಪಯೋಗಿ ಸರಕಲ್ಲ. ಅದನ್ನು ಕೇವಲ ಪ್ರಯೋಜನದ ದೃಷ್ಟಿಯಿಂದ ನೋಡಲಾಗದು. ಅದು ನಮ್ಮ ಭಾವಲೋಕದಲ್ಲಿ ಸುಪ್ತವಾಗಿರುತ್ತದೆ. ಬಾಹ್ಯದ ಜೀವನಶೈಲಿ ಎಷ್ಟೇ ಬದಲಾದರೂ ಅಂತರಂಗದಲ್ಲಿ ಅದು ತನ್ನ ಜೀವಸೆಲೆಯನ್ನು ಜಿನುಗಿಸುತ್ತಿರುತ್ತದೆ... ಅರವತ್ತರ ದಶಕದವರೆಗೆ ಜನಪದ ಸಾಹಿತ್ಯ ಸಂಗ್ರಹ ಮತ್ತು ಅದರ ರಸವಿಮರ್ಶೆಗಳು ಅವ್ಯಾಹತವಾಗಿ ನಡೆದುಬಂದುವು. ಎಪ್ಪತ್ತರ ದಶಕದಲ್ಲಿ ಜಾನಪದವು ವಿಶ್ವವಿದ್ಯಾಲಯಗಳಲ್ಲಿ ಒಂದು ಪಠ್ಯವಾದ ಮೇಲೆ ಅದನ್ನು ನೋಡುವ ದೃಷ್ಟಿಕೋನವೇ ಬದಲಾಯಿತು. ಭಾವುಕತನದ ಸ್ಥಾನವನ್ನು ವೈಜ್ಞಾನಿಕ ವಿವೇಚನೆ ಆಕ್ರಮಿಸಿಕೊಂಡಿತು. ಕೇವಲ ಜನಪದ ಸಾಹಿತ್ಯಕ್ಕೆ ಮಿತಿಗೊಂಡಿದ್ದ ಜಾನಪದ ಅಧ್ಯಯನವು ಸಾಹಿತ್ಯೇತರ ಕ್ಷೇತ್ರಗಳತ್ತ ಕೈಚಾಚಿತು. ಸಂಶೋಧನೆಗಳಿಗೆ ನಾಂದಿಹಾಡಿತು. ಇಂಥ ವ್ಯಾಪಕ ಅಧ್ಯಯನ ಮತ್ತು ಜಾನಪದ ಸಮ್ಮೇಳನ ಏಕಕಾಲಕ್ಕೆ ಸುರುವಾದುದನ್ನು ನೆನಪಿಸಿಕೊಂಡರು... ಇಂದು ಜಾನಪದವು ಒಂದು ಜ್ಞಾನಶಿಸ್ತು ಎನಿಸಿ ಬೆಳೆಯುತ್ತಿದೆಯಾದರೂ ಮೂಲ ಆಕರ ಸಂಗ್ರಹಕಾರ್ಯ ಹಿಂದೆ ಬಿದ್ದಿದೆ. ಎಪ್ಪತ್ತರ ನಂತರ ಸಂಗ್ರಹಕಾರ್ಯ ಕ್ಷೀಣಿಸುತ್ತ ಬಂತು. ಸಂಶೋಧನೆ–ವಿಶ್ಲೇಷಣೆಗಳಲ್ಲಿ ತೊಡಗಿದ ಈಚಿನ ವಿದ್ವಾಂಸರು ಸಂಗ್ರಹಕಾರ್ಯವನ್ನು ಅಲಕ್ಷಿಸಿದರು. ಹಳ್ಳಿಗರ ಜೀವನಶೈಲಿಯೊಂದಿಗೆ

ಜಾನಪದವು ಸ್ಥಿತ್ಯಂತರಗೊಳ್ಳುತ್ತ ಬದುಕಿನ ಭಾಗವಾಗಿ ಉಳಿಯಲಿಲ್ಲ. ದಾಖಲೀಕರಣ ಕೂಡ ಸಮರ್ಪಕವಾಗಿ ನಡೆಯಲಿಲ್ಲ. ಹಂತಿಪದ, ಬೀಸುಪದಗಳು ಕಣ್ಮರೆಯಾದವು. ಜಾನಪದ ಅಧ್ಯಯನ ಅಪೂರ್ಣವಾಯಿತು. ವಿದ್ವತ್ ಪ್ರತಿಪಾದನೆಯ ಭರಾಟೆಯಲ್ಲಿ ಜನಪದ ಅಮೂಲ್ಯ ಸಂಪತ್ತನ್ನು ಸಂಗ್ರಹಿಸದೆ ಹೋದುದರ ಬಗೆಗೆ ವಿಷಾದ ವ್ಯಕ್ತಪಡಿಸುತ್ತಾರೆ..... ಜಾಗತೀಕರಣಕ್ಕೆ ಜಾನಪದವು ಪರ್ಯಾಯವಾಗಿರುವುದು ಖಚಿತವಾಗಿದೆ. ಜಾನಪದದ ಮೂಲಕ ಮಾತ್ರ ಒಂದು ಜನಸಮುದಾಯವು ತನ್ನತನವನ್ನು ಸ್ಥಾಪಿಸಿಕೊಳ್ಳಲು ಸಾಧ್ಯ. ಈ ಹಿನ್ನೆಲೆಯಲ್ಲಿ ಜಾನಪದವನ್ನು ಪರಿಷ್ಕರಿಸಿ ಕಾಪಾಡಿಕೊಳ್ಳಬೇಕಾದ, ಆಧುನಿಕ ಜೀವನಶೈಲಿ ಅಭಿರುಚಿಗಳಿಗೆ ತಕ್ಕಂತೆ ಅದನ್ನು ನವೀಕೃತಗೊಳಿಸುವ ಸಾಮೂಹಿಕ ಪ್ರಯತ್ನಗಳು ನಡೆಯಬೇಕಾಗಿದೆ. ಜಾನಪದದ ಕೆಲವು ಅಂಶಗಳನ್ನಾದರೂ (ರಂಗಭೂಮಿ, ಸಂಗೀತ, ಕುಣಿತ.... ಇತ್ಯಾದಿ). ನಮ್ಮ ಸಾಂಸ್ಕೃತಿಕ ಜೀವನದಲ್ಲಿ ಬೆರೆಸಿಕೊಳ್ಳಬೇಕಾಗಿದೆ ಎಂದು ಸಾಂದರ್ಭಿಕ ಮಾತುಗಳನ್ನಾಡಿದರು. ಮುಂದುವರಿದು– ಹೊರಜಗತ್ತಿಗೆ ತನ್ನನ್ನು ತೆರೆದುಕೊಂಡಾಗ ಮಾತ್ರ ನಮ್ಮ ಜಾನಪದಕ್ಕೆ ನವಚೈತನ್ಯ ಮತ್ತು ಪ್ರಚಾರಗಳು ಲಭ್ಯವಾಗುತ್ತವೆಂದರು. ಜಾನಪದದ ಪುನರುಜ್ಜೀವನ ಪ್ರಚಾರಗಳಿಗೆ 'ಪ್ರವಾಸೋದ್ಯಮ'ವು ಪ್ರೇರಣೆನೀಡಬಹುದೆಂಬ ವಿಶ್ವಾಸದಿಂದ ಪ್ರಸ್ತುತ ಸಮ್ಮೇಲನದ ಚರ್ಚಾವಿಷಯವನ್ನು "ದೇಸೀ ಪರಂಪರೆ ಮತ್ತು ಪ್ರವಾಸೋದ್ಯಮ" ಎಂದು ಇಟ್ಟುಕೊಳ್ಳಲಾಗಿದೆ ಎಂದರು.

**ಜಾನಪದ ಕುರಿತು ಈಗ ಮಾಡಬೇಕಾದುದೇನು?** (ಮುಂದಿನ ಯೋಜನೆಗಳು) – ಬರವಣಿಗೆಗೆ ಮುಖ್ಯವಾದ **'ಜನಪದ ಕ್ಷೇತ್ರಕಾರ್ಯ'** ಇನ್ನೂ ನಡೆಯಬೇಕಾದ ಅಗತ್ಯವಿದೆ. ಕ್ಷೇತ್ರಕಾರ್ಯದಿಂದ ಕಲಾವಿದರ ಸಂಪರ್ಕಪಡೆದು, ಅವರ ಕಲೆ ವಿಷಯಕ ಜ್ಞಾನಸಂಪಾದನೆ ಸಾಧ್ಯ. ಕ್ಷೇತ್ರಕಾರ್ಯ ವೈಯಕ್ತಿಕವಾಗಿ ವಿನಯ ತಂದುಕೊಡುತ್ತದೆ; ಜಾನಪದದ ಒಡನಾಟ ಬೆಳೆಸುತ್ತದೆ. ನಾನೇ ದೊಡ್ಡವನೆಂಬ ಅಹಂಕಾರ ನಿರಸನಗೊಳಿಸಿ, ಸಹೃದಯತೆ, ಸೌಜನ್ಯ, ಪ್ರೀತಿ–ತಂದುಕೊಡುವುದರ ಮೂಲಕ ಆತ್ಮಾವಲೋಕನವನ್ನು ಹುಟ್ಟಿಸುತ್ತದೆ. ಅದಕ್ಕಾಗಿ ಜನಪದ ಕ್ಷೇತ್ರ

ಕಾರ್ಯ, ದಾಖಲೀಕರಣದ ಅಗತ್ಯವನ್ನು ಮಲಶೆಟ್ಟಿ ಅವರು ಒತ್ತಿ ಹೇಳುತ್ತಾರೆ. ಜನಪದ ಕ್ಷೇತ್ರಕಾರ್ಯ ಕುರಿತು ಇವರಿಗೆ ದಿವ್ಯವಾದ ಅತೃಪ್ತಿಯಿದೆ. ಜಾನಪದದ ಕೆಲಸವನ್ನು ಸಂಕಲನಗಳಿಂದ ಆರಂಭಿಸಿದೆಯಾದರೂ ನಂತರದಲ್ಲಿ ಸಂಗ್ರಹಕಾರ್ಯ ಕುಂಠಿತಗೊಂಡಿತು–ವಿದ್ವಾಂಸರೆನಿಸಿಕೊಳ್ಳುವ ಅಮಲಿನಲ್ಲಿ ಸಂಗ್ರಹಕಾರ್ಯ ಅವಜ್ಞೆಗೊಳಗಾಯಿತು. ಈಗ ಅದು ನಮಗೆ ಅಪರಾಧವಾಗಿ ಕಾಡುತ್ತಿದೆ ಎನ್ನುತ್ತಾರೆ ಮಲಶೆಟ್ಟಿ ಅವರು. ಜನಪದ ಸಂಗ್ರಹಕಾರ್ಯ ಈಗಾಗಲೇ ಆದುದು ಕಡಮೆ, ಆಗಬೇಕಾದುದು ತುಂಬ ಇದೆ. ಆದುದರಿಂದ ಸಂಶೋಧನೆ–ವಿಶ್ಲೇಷಣೆಗಿಂತ ಮೊದಲು ಸಂಗ್ರಹಕಾರ್ಯ ಮಾಡಬೇಕೆನ್ನುತ್ತಾರೆ. ಕ್ಷೇತ್ರಕಾರ್ಯದ 'ಅಪರಾಧಿ ಪ್ರಜ್ಞೆ'ಯಿಂದ ಹೊರಬಂದು ಶ್ರಮದಾಯಕ ಕ್ಷೇತ್ರಕಾರ್ಯ ಕೈಗೊಂಡಿದ್ದಾದರೆ ನಿಜಕ್ಕೂ ಜಾನಪದಕ್ಕೆ ಶಕ್ತಿಬರುತ್ತದೆ.

**ಅಂತರ್‌ಶಿಸ್ತೀಯ ಅಧ್ಯಯನ'** ಗಳಿಗೆ ಮಲಶೆಟ್ಟಿ ಒತ್ತುಕೊಡುತ್ತಾರೆ. ಶಾಸ್ತ್ರೀಯ ಸಂಗೀತ, ನೃತ್ಯ, ಚಿತ್ರಕಲೆ, ಇವುಗಳ ಹಿನ್ನೆಲೆಯಲ್ಲಿ ಜನಪದ ಕಲೆಗಳ ಅಧ್ಯಯನ, ವಿಶ್ಲೇಷಣೆ ನಡೆಯಬೇಕು. ಜಾನಪದ ಕಲೆಗಳು ಅರಗಿಸಿಕೊಂಡಿರುವ ಶಾಸ್ತ್ರೀಯ ಅಂಶಗಳನ್ನು ಗುರುತಿಸುವುದಾಗಬೇಕು. ಶಾಸ್ತ್ರೀಯ ಕಲೆಗಳು ಸ್ವೀಕರಿಸುವ ಜಾನಪದ ಅಂಶಗಳನ್ನು ಗುರುತಿಸುವ ಕೆಲಸ ಆಗಬೇಕು. ಜನಪದ ಸಂಗೀತದಲ್ಲಿ ಅಳವಟ್ಟ ಕರ್ನಾಟಕೀ–ಹಿಂದೂಸ್ತಾನೀ ಸಂಗೀತ ಅಧ್ಯಯನಗಳೂ ನಡೆಯಬೇಕು. ಬಯಲಾಟದ ಸಂಗೀತ–ರಾಗಗಳನ್ನು ಗುರುತಿಸುವುದಾಗಬೇಕು. ಬಯಲಾಟದ ಹಸ್ತಪ್ರತಿಗಳ ಸಂಗ್ರಹ–ಹಾಡುಗಳ ಧಾಟಿಗಳೊಂದಿಗೆ ದಾಖಲೀಕರಣ ಆಗಬೇಕು. ಇದೆಲ್ಲ ಯೋಜನಾಬದ್ಧವಾಗಿ ಸಾಗಬೇಕಾದ ಕಾರ್ಯವೆನ್ನುತ್ತಾರೆ ಮಲಶೆಟ್ಟಿ ಅವರು.

**'ಜಾನಪದದ ಅನ್ವಯಿಕತೆ'** – ಕೈಗೆ ದೊರೆತ ಜಾನಪದವೆಲ್ಲವನ್ನೂ ಉಳಿಸಿಕೊಳ್ಳುವುದು ದಡ್ಡತನ. ಕಾಲದ ಬದಲಾವಣೆ, ಜೀವನದ ರೀತಿಯೊಂದಿಗೆ ಕೆಲವು ಕಳಚಿಕೊಳ್ಳುತ್ತವೆ. ಕೆಲವನ್ನು ಬದುಕಿಗೆ ಅನ್ವಯಿಸಿಕೊಳ್ಳಬೇಕು. ಉದಾ : ಬೀಸುವ, ಕುಟ್ಟುವ ಹಾಡು, ಹಂತಿಹಾಡು

ಇತ್ಯಾದಿ. ಮಿಶ್ರಣ, ಬದಲಾವಣೆ, ಪ್ರಭಾವ–ಪ್ರೇರಣೆಗಳಿಗೆ ಒಳಗಾಗುವ ಮುಕ್ತಸ್ವಾತಂತ್ರ್ಯ ಜನಪದ ಕಲೆ–ಹಾಡುಗಳಿಗಿದೆ. ಏನೇ ಆದರೂ ನಮ್ಮ ಕಾಲಕ್ಕೆ ಅನ್ವಯಿಸಿಕೊಳ್ಳುವ ಜಾಣ್ಮೆಯನ್ನು ತೋರಬೇಕಾಗಿದೆ.

**ಪರಿಷ್ಕರಣ** – ಜಾನಪದ ರಂಗಕಲೆಗಳಲ್ಲಿ ಒಂದು ಹಂತದ ಪರಿಷ್ಕರಣೆ ಅನಿವಾರ್ಯ. ಪರಿಷ್ಕರಣೆ ಮಾಡದಿದ್ದಲ್ಲಿ ಕಲೆಗಳಿಗೆ ಉಳಿಗಾಲವಿಲ್ಲ. ಇಂದು ಹಳ್ಳಿ–ಪಟ್ಟಣದ ಮಧ್ಯೆ ವ್ಯತ್ಯಾಸ ಉಳಿದಿಲ್ಲ. ಜಾನಪದ ಮತ್ತು ಶಿಷ್ಟದ ನಡುವೆ ಅಂತರ ಕಡಿಮೆ ಆಗುತ್ತಿದೆ. ಆದರೆ ಜಾನಪದ ಪರಂಪರೆಯನ್ನುಳಿಸಿಕೊಂಡೇ ಬದಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮಲಶೆಟ್ಟಿ ಅವರು ಶ್ರೀಕೃಷ್ಣ ಪಾರಿಜಾತವನ್ನು ಪರಿಷ್ಕೃತ ರೂಪಕ್ಕಿಳಿಸುವ ಬಲವಾದ ಆಸೆಯನ್ನು ಹೊಂದಿದ್ದಾರೆ. ಸಂಘಟನಾ ಶಕ್ತಿಯಲ್ಲಿ ಇವರಿಗೆ ಆಸಕ್ತಿಯಿದ್ದಂತಿಲ್ಲ. ವೈಯಕ್ತಿಕ ನೆಲೆಯಲ್ಲಿ ಜಾನಪದ ಕುರಿತು ಕೈಲಾದಷ್ಟು ಕೆಲಸಮಾಡುವುದಾಗಿ ವಿನಮ್ರವಾಗಿ ಹೇಳುತ್ತಾರೆ. ಜಾನಪದ ಕಾರ್ಯಮಾಡುವಲ್ಲಿ ಅನಾನುಕೂಲತೆ, ವಯಸ್ಸು ಒಂದಿಷ್ಟು ಅಡ್ಡಪಡಿಸುತ್ತವಾದರೂ ಇವರಿಗೆ ಉತ್ಸಾಹದ ಕೊರತೆಯಿಲ್ಲ. ಜನಪದ ತ್ರಿಪದಿ, ಗಾದೆಮಾತು ಮುಂತಾದುದನ್ನು ಕರ್ನಾಟಕದಲ್ಲಿ ಮುಕ್ತವಾಗಿ ಅಧ್ಯಯನಿಸಬೇಕು, ಪ್ರಾದೇಶಿಕತೆ ಇರಬಾರದು. ಜಾನಪದದ ವ್ಯಾಪಕತೆಯನ್ನು ಅಲ್ಲಗಳೆಯಲಾಗದೆನ್ನುತ್ತಾರೆ.

ಜಾನಪದ ಕಾರ್ಯವನ್ನು ಇಂದಿನವರು ಹೀಗೆ ಮುಂದುವರಿಸಬೇಕೆನ್ನುವ ಮಲಶೆಟ್ಟಿ ಅವರು ಈ ಕ್ಷೇತ್ರದಲ್ಲಿ ಹೇಳಿದಂತೆ ತಮ್ಮ ನಿಲುವಿಗೆ ತಕ್ಕಷ್ಟು ಮಾಡಿತೋರಿದ್ದಾರೆ. ಉಡುಪಿಯ ಆರ್‌ಆರ್‌ಸಿ ಆಶ್ರಯದಲ್ಲಿ ಬಯಲಾಟ ಕಮ್ಮಟದ ನಿರ್ದೇಶಕರಾಗಿ, ಮೂಡಲಪಾಯ ಸಂಗೀತ ಕುರಿತು; ಕರ್ನಾಟಕ ಜಾನಪದ ಪರಿಷತ್ತು ಆಶ್ರಯದಲ್ಲಿಯೂ ಮೂಡಲಪಾಯ ಸಂಗೀತ ಕುರಿತು ಸಾಕಷ್ಟು ಕಾರ್ಯಮಾಡಿದ್ದಾರೆ. ಮೂಡಲಪಾಯ ಕುಣಿತ ಕಮ್ಮಟವನ್ನೂ ಆರ್‌ಆರ್‌ಸಿ (ಉಡುಪಿ)ಯಲ್ಲಿ ನಡೆಸಿದ ಶ್ರೇಯಸ್ಸು ಇವರದು. ಬೆಳಗಾವಿಯಲ್ಲಿ

ಪಾರಿಜಾತ ಹಾಡುಗಳ ದಾಖಲೀಕರಣ ಕೂಡ ಮಾಡಿದ್ದಾರೆ. 'ಬಯಲಾಟ ಹಾಡುಗಳ ತಂಡ' ಕಟ್ಟಿಕೊಂಡು ಬಯಲಾಟ ಹಾಡುಗಳನ್ನು ಮೂಲ ಧಾಟಿಯಲ್ಲಿ ಹಾಡುತ್ತ ಕರ್ನಾಟಕದ ತುಂಬೆಲ್ಲ ಪ್ರಚಾರ-ಪ್ರಸಾರ ಕಾರ್ಯ ಕೈಕೊಂಡಿದ್ದರು. ಬೈಲೂರು ಬಸಲಿಂಗಯ್ಯ ಹಿರೇಮಠ ಈ ತಂಡದಲ್ಲಿಯೇ ಬಯಲಾಟ ಹಾಡುಗಾರನಾಗಿ ರೂಪುಗೊಂಡ ಕಲಾವಿದ. ಈ ತಂಡದ ಬಯಲಾಟ ಹಾಡುಗಳು ಧಾರವಾಡ ಆಕಾಶವಾಣಿಯಿಂದ ಸತತ ಹತ್ತು ವರುಷಗಳವರೆಗೆ ಪ್ರಸಾರವಾಗಿದೆ.

ಸಂಸ್ಕೃತಿ ಪ್ರಿಯ ಎಂ.ಪಿ. ಪ್ರಕಾಶ್ ಅವರು (ವಕೀಲರಿದ್ದ ಸಂದರ್ಭ) ಮಲಶೆಟ್ಟಿ ಅವರನ್ನು ಒಮ್ಮೆ ಹೀಗೆ ಕೇಳಿದರಂತೆ: 'ನೀವು ಬಯಲಾಟದಿಂದ ಪಿಎಚ್.ಡಿ ಪಡೆದಿರಿ. ಬಯಲಾಟಕ್ಕೆ ನಿಮ್ಮ ಕೊಡುಗೆ ಏನು? ಎಂದು. ಆಗ ಮಲಶೆಟ್ಟಿ ಅವರು 'ಗಿರಿಜಾ ಕಲ್ಯಾಣ' ದೊಡ್ಡಾಟ ರಚಿಸಿ, ಸೂತ್ರಧಾರನಾಗಿ, ನಿರ್ದೇಶಕನಾಗಿ, ಮೂರು ಗಂಟೆಯಲ್ಲಿ ಪ್ರಯೋಗಿಸಿ ತೋರಿಸಿದೆನೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಪ್ರಸ್ತುತ ದೊಡ್ಡಾಟವನ್ನು ಹೊಸಪೇಟೆಯ ತಮ್ಮ ಸ್ವಂತ ತಂಡದೊಂದಿಗೆ ನಿರಂತರ ಇಪ್ಪತ್ತು ವರುಷಗಳವರೆಗೆ ನಾಡಿನ ಒಳಗೆ ಮತ್ತು ಹೊರಗೆ ಪ್ರದರ್ಶಿಸಿ, ಯಶಸಾಧಿಸಿದ ಸಾಹಸಿ ಮಲಶೆಟ್ಟಿ ಅವರು. ಈ ಆಟ ತುಂಬ ಪ್ರಸಿದ್ಧಿಯನ್ನು-ಜನಪ್ರಿಯತೆಯನ್ನು ಗಳಿಸಿತು. ಕನ್ನಡ-ಮರಾಠಿ ಪತ್ರಿಕೆಗಳು ಹಾಡಿಹೊಗಳಿದುವು, ಚರ್ಚಿಸಿದುವು, ವಸ್ತುನಿಷ್ಠ ವಿಮರ್ಶೆ ಕೂಡ ಬಂದಿತು. ಹೊಸಪೇಟೆ ಸಂಗಮದ ಸ್ವಾಮಿಗಳು, ಸುತ್ತೂರು ಶ್ರೀಗಳು, ಎಂ.ಪಿ. ಪ್ರಕಾಶ್ ಅವರು, ಕು.ಶಿ. ಹರಿದಾಸಭಟ್ಟ, ಎಚ್.ಎಲ್. ನಾಗೇಗೌಡ, ಜೀಶಂಪ, ರಾಮಚಂದ್ರೇಗೌಡ, ಗೊರುಚ ಮುಂತಾದವರು ಆಟವನ್ನು ಮೆಚ್ಚಿ ಪ್ರೋತ್ಸಾಹಿಸಿದರು. ಆಟವನ್ನು ದಿಲ್ಲಿಯಲ್ಲಿಯೂ ಪ್ರದರ್ಶಿಸಲು ಎಂ.ಪಿ. ಪ್ರಕಾಶ್ ಸಹಾಯಮಾಡಿದರು. ಹೊಸಪೇಟೆ, ಹೂವಿನ ಹಡಗಲಿ ಮೊದಲಾದೆಡೆ ಮಲಶೆಟ್ಟಿ ಅವರಿಗೆ ಗೌರವಸನ್ಮಾನಗಳು ಜರುಗಿದವು.

**ಪ್ರಶಸ್ತಿ ಗೌರವ** : ಡಾ। ಬಸವರಾಜ ಮಲಶೆಟ್ಟಿ ಅವರ ಜನಪದ ಸಾಹಿತ್ಯ, ಸಂಸ್ಕೃತಿ, ಸಂಗೀತ, ಕಲೆ ಕುರಿತಾದ ನೂರಾರು ಸಂಶೋಧನಾತ್ಮಕ, ವಿಮರ್ಶಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನ ಹಾಗು ಹತ್ತಾರು ಮೌಲಿಕ ಕೃತಿಗಳನ್ನು ಅನುಲಕ್ಷಿಸಿ, ಸರಕಾರ, ಸಾರ್ವಜನಿಕ ವಲಯಗಳಿಂದ ಹಲವಾರು ಪ್ರಶಸ್ತಿಗಳು ಸಂದಿವೆ. ಕರ್ನಾಟಕ ರಾಜ್ಯ ಜೆ.ಸಿ. ಯುವ ಪ್ರಶಸ್ತಿ (೧೯೮೫), ಕರ್ನಾಟಕ ಜಾನಪದ ಅಕಾಡೆಮಿ 'ಜನಪದ ತಜ್ಞ' ಪ್ರಶಸ್ತಿ (೧೯೯೬), ಕರ್ನಾಟಕ ಜಾನಪದ ಪರಿಷತ್ತಿನ ವಿಶೇಷ ಪುರಸ್ಕಾರ (೨೦೦೩), ಮಹಾಕವಿ ಹರಿಹರನ ಪದಕೋಶಕ್ಕೆ (೧೯೯೨) ಶಿರಾತ್ರೀಶ್ವರ ದತ್ತಿ ನಿಧಿ ಪ್ರಶಸ್ತಿ (ಮೈಸೂರು), ಕಾವ್ಯಾನಂದ ಪ್ರಶಸ್ತಿ (ಬೆಂಗಳೂರು), ಗುಲಬರ್ಗಾ ವಿಶ್ವವಿದ್ಯಾಲಯ ಪ್ರಶಸ್ತಿ (ಗುಲಬರ್ಗಾ) ಗಳು ಲಭಿಸಿವೆ. ಮಾರ್ಚ್ ೧೧, ೧೨, ೨೦೦೭ರಂದು ಶಿಗ್ಗಾಂವಿಯಲ್ಲಿ ಜರುಗಿದ ೩೩ನೇ ಅಖಿಲ ಕರ್ನಾಟಕ ಜಾನಪದ ಸಾಹಿತ್ಯ ಸಮ್ಮೇಲನದ ಅಧ್ಯಕ್ಷತೆಯನ್ನು ನೀಡಿ, ಧಾರವಾಡ ಕ.ವಿ.ವಿ. ಮಲಶೆಟ್ಟಿ ಅವರನ್ನು ಗೌರವಿಸಿದೆ.

ಶಿಷ್ಟ ಸಾಹಿತ್ಯ–ನಾಟಕಕ್ಷೇತ್ರಕ್ಕೂ ಇವರ ದುಡಿಮೆ ವಿಸ್ತರಿಸಿದೆ. ಮಹಾಕವಿ ಹರಿಹರನ ಕೃತಿಗಳ ಪದಕೋಶ, ಶರಣರು ಮತ್ತು ಕಾಯಕ, ಪ್ರಾಚೀನ ಕರ್ನಾಟಕದಲ್ಲಿ ನಾಟಕ ಪರಂಪರೆ–ಇತ್ಯಾದಿ ಮಹತ್ವದ ಗ್ರಂಥಗಳನ್ನೂ ಬ.ಮ. ಬರೆದುದನ್ನು ಪುನಾ ಹೇಳಬೇಕಿಲ್ಲ. ರಂಗನಾಟಕಗಳ ನಟ ಮತ್ತು ನಿರ್ದೇಶಕರಾಗಿಯೂ ಕಲಾಸೇವೆಮಾಡಿದ್ದಾರೆ. ಆಕಾಶವಾಣಿ, ದೂರದರ್ಶನಗಳ ನಾಟಕ, ಧಾರವಾಹಿಗಳಲ್ಲಿಯೂ ಅಭಿನಯಿಸಿದ ಶ್ರೇಯಸ್ಸು ಇವರದು. ನವ್ಹೆಂಬರ್ ೨೮, ೨೯ – ೨೦೦೬ರಂದು 'ಕಂಪ್ಲಿ'ಯಲ್ಲಿ ಜರುಗಿದ ಹೋಬಳಿ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷತೆಯುನ್ನು ವಹಿಸಿಕೊಂಡು ಕಾರ್ಯಕ್ರಮವನ್ನು ಸಾಂಗಗೊಳಿಸಿದ್ದು– ಮಲಶೆಟ್ಟಿ ಅವರು ಗೈದ ಸಾಧನೆಗೆ ದೊರೆತ ಗೌರವವೇ.

ಸಭೆ-ಸಮಾರಂಭ, ವಿಚಾರಸಂಕಿರಣ, ವಾದವಿವಾದ, ಸಂವಾದ, ಚರ್ಚೆ, ಗೋಷ್ಠಿ-ಯಾವುದೇ ಇರಲಿ, ಅಲ್ಲೆಲ್ಲ ವಿಶೇಷವಾಗಿ ಜಾನಪದ ಕುರಿತೇ ತಮ್ಮ ಸ್ವೋಪಜ್ಞತೆಯನ್ನು ಮೆರೆದ ನಿಜವಾದ ಜಾನಪದ ಅಭಿಮಾನಿ, 'ಜಾನಪದ ತಜ್ಞ' ಬಸವರಾಜ ಮಲಶೆಟ್ಟಿ ಅವರು. ಇವರು ಜಾನಪದ ಅಧ್ಯಯವನ್ನು ನಮ್ಮ ನಾಡಿನ ನೆಲ-ಜಲ-ಸಂಸ್ಕೃತಿಗಳ ನೆಲೆಯಲ್ಲಿಯೇ ಕೈಕೊಳ್ಳುವ ಅನಿವಾರ್ಯತೆಯನ್ನು ಮುಂದಿಟ್ಟಿದ್ದಾರೆ. ಪಾಶ್ಚಾತ್ಯ ಜನಪದ ಸಾಹಿತ್ಯ ಅದರ ಸಿದ್ಧಾಂತಗಳು, ನಮ್ಮ ಜನಪದ ಸಾಹಿತ್ಯಾಧ್ಯಯನದ ಮಾನ ದಂಡಗಳಾಗಲಾರವು. ಆ ಅಧ್ಯಯನ ವಿಧಾನದ ಸಹಾಯ ಮಾತ್ರ ಪಡೆದುಕೊಳ್ಳಬಹುದೆಂದು ಸೂಚಿಸಿದ್ದಾರೆ. ಅಂತೆಯೇ ಹಂತಿ, ಹೋಳಿ, ಡೊಳ್ಳು, ಕೋಲಾಟ, ಕುಟ್ಟು, ಬೀಸು, ಗರತಿ-ಹಾಡುಗಳು ಜಾಗತೀಕರಣದ ಸಂದರ್ಭದಲ್ಲಿ ಉಳಿಯುವ ಸಂಭವವಿಲ್ಲ. ಆದರೆ ಸಣ್ಣಾಟ, ದೊಡ್ಡಾಟ, ಪಾರಿಜಾತ, ಯಕ್ಷಗಾನ ಮುಂತಾದ ಜನಪದ ರಂಗಪ್ರದರ್ಶನ ಕಲೆಗಳನ್ನು ಆಧುನಿಕ ಅಭಿರುಚಿಗನುಗುಣವಾಗಿ ಮೂಲಕ್ಕೆ ಧಕ್ಕೆಬಾರದಂತೆ ಪರಿಷ್ಕರಿಸಿ ಉಳಿಸಿ ಬೆಳೆಸಬಹುದು. ಆ ಪ್ರಸ್ತುತತೆ ಮತ್ತು ನಿರಂತರತೆ ರಂಗಕಲೆಗಳಿಗೆ ಮಾತ್ರ ಇದೆ ಎಂದು ಈಚೆಗೆ ಬ.ಮ. ಅಭಿಪ್ರಾಯಪಟ್ಟುದು ಸರಿ ಎಂದು ತೋರುತ್ತದೆ. ನಮ್ಮ ಸ್ಥಳೀಯ ರಂಗಕಲೆಗಳು, ವಿದೇಶೀ ಕಲೆಗಳನ್ನು ಅರಗಿಸಿಕೊಂಡು ಬೆಳೆಯಬೇಕಾದ ಅನಿವಾರ್ಯತೆ ಜಾಗತೀಕರಣದಿಂದ ಸೃಷ್ಟಿಯಾದುದನ್ನೂ ಸೂಚ್ಯವಾಗಿ ಹೇಳಿದ ಮಲಶೆಟ್ಟಿ ಅವರ ತಾರ್ಕಿಕತೆಯನ್ನು ಅಲ್ಲಗಳೆಯಲಾಗದು.

ಕಳೆದು ಸುಮಾರು ೩ ದಶಕಗಳಿಂದ ಅಧ್ಯಾಪನ ಸೇವೆಯಲ್ಲಿದ್ದು, ದಿನಾಂಕ ೧೦-೦೮-೨೦೦೭ ರಂದು ನಿವೃತ್ತಿಯಾದ ಜನಪದ ವಿದ್ವಾಂಸ ಮತ್ತು ಕಲಾವಿದ ಡಾ। ಬಸವರಾಜ ಮಲಶೆಟ್ಟಿ ಅವರ ಶೈಕ್ಷಣಿಕ, ಸಾಹಿತ್ಯಕ ಅದರಲ್ಲಿಯೂ ಜಾನಪದ ಮತ್ತು ಕಲಾಸೇವೆ ಅನುಪಮವಾದುದು.

* * *

# ಡಾ. ಬಸವರಾಜ ಮಲಶೆಟ್ಟಿ

ಡಾ. ಬಸವರಾಜ ಮಲಶೆಟ್ಟಿ ಅವರು ಜನಪದ ಸಾಹಿತ್ಯ ಸಂಗ್ರಹ ಸಂಪಾದನೆ ವಿಶ್ಲೇಷಣೆ ಪ್ರಕಟಣೆಗಳಲ್ಲಿ ಹೆಸರಾದವರು. ಜನಪದ ರಂಗಭೂಮಿಯ ಬಗೆಗೆ ಅಧಿಕೃತವಾಗಿ ಮಾತಾಡಬಲ್ಲ, ಬರೆಯಬಲ್ಲ ಕೆಲವೇ ಮಂದಿ ಚಿಂತಕರಲ್ಲಿ ಪ್ರಮುಖರು. ಅವರು ತಮ್ಮ ಒಟ್ಟು ಬರವಣಿಗೆಯಲ್ಲಿ ಬಹುಮುಖಿ ಜಾನಪದಕ್ಕೆ ಸಿಂಹಪಾಲು ನೀಡಿದುವುದರಿಂದ ಜಾನಪದ ಕ್ಷೇತ್ರಕ್ಕೆ ಬಹಳ ಉಪಕಾರವಾಗಿದೆ. ಅವರ ಚಿಂತನಶೀಲ ಲೇಖನಗಳು ಅಧ್ಯಯನಕಾರರಿಗೆ ಮೌಲಿಕ ಮಾಹಿತಿಗಳನ್ನು ನೀಡುತ್ತವೆ. ಪ್ರಸ್ತುತ ಗ್ರಂಥದಲ್ಲಿ ಡಾ. ಸಿ.ಕೆ. ನಾವಲಗಿಯವರು ವಿಹಂಗಮ ನೋಟದಲ್ಲಿ ಡಾ. ಬಸವರಾಜ ಮಲಶೆಟ್ಟರ ಜಾನಪದ ಕೊಡುಗೆಯನ್ನು ವಿಶೇಷವಾಗಿ ಪರಿಚಯಿಸಿದ್ದಾರೆ.

– ಪ್ರೊ. ಡಿ. ಲಿಂಗಯ್ಯ

**ಕರ್ನಾಟಕ ಜಾನಪದ ಪರಿಷತ್ತು**

ನಂ.೧, ಜಾನಪದ ಸಿರಿಭುವನ, ಜಲದರ್ಶಿನಿ ಬಡಾವಣೆ,
ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ, ಹೊಸ ಬಿ.ಇ.ಎಲ್. ರಸ್ತೆ,
ಬೆಂಗಳೂರು – ೫೬೦ ೦೫೪